ಒಂದೇ ಗುಂಪಿಗೆ ಸೇರಿದವರಾದರೂ ನಿಜವಾಗಿ ಒಂದು ಸ್ಥಾನಮಾನಕ್ಕೆ ಅಂಟಿಕೊಂಡಿರುವವರಾಗಿದ್ದಾರೆ. ಆದ್ದರಿಂದ ಜನಗಳು ಇವರ ಬಗ್ಗೆ ಎಷ್ಟು ಹುಷಾರಾಗಿರಬೇಕು ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವರು ಸ್ವಾರ್ಥಿಗಳಾಗಿ ನಮ್ಮ ದೇಶದ ಹಣವನ್ನು ದುರುಪಯೋಗಪಡಿಸಿಕೊಂಡು ಈಗ ನಿಜವಾಗಿ ಕಾಂಗ್ರೆಸ್ ಆಡಳಿತವನ್ನು ನಡೆಸುವುದಕ್ಕೆ ಶಕ್ತಿ ಇಲ್ಲದವರಾಗಿದ್ದಾರೆ. ಮುಂದೆ ಅವರ ಶಕ್ತಿ ಇನ್ನು ಕುಂದುಹೋಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಹುದು. 1962ನೇ ಇಸವಿಯಲ್ಲಿ ಅಷ್ಟಗ್ರಹಗಳು ಒಂದಾಗುವ ಸಂಭವವಿರುವುದರಿಂದ ಆ ಹೊತ್ತಿಗೆ ಇವರು ಮಾಡುತ್ತಿರುವ ಅನ್ಯಾಯಗಳು ನಿಜವಾಗಿ ಆ ಕಡೆಗೆ ಹೋಗಿ ಇವರನ್ನು ಆಡಳಿತ ಪಕ್ಷದಿಂದ ದೂರ ಮಾಡುತ್ತದೆಂದು ನಾನು ನಂಬಿರುತ್ತೇನೆ. ಪಿ. ಎಸ್. ಪಿ.ಯವರು ಮುಂದಿನ ಚುನಾವಣೆಯಲ್ಲಿ ಆಡಳಿತ ನಡೆಸುತ್ತಾರೆ. ಅದರಲ್ಲಿ ಯಾವ ಸಂದೇಹವೂ ಇಲ್ಲ. ಅವರಲ್ಲಿ ಯೋಗ್ಯವುಳ್ಳವರು ಮಾತ್ರ ಸಹಕರಿಸುತ್ತಾರೆಂದು ನಾನು ತಿಳಿದಿದ್ದೇನೆ. ಯೋಗ್ಯರಾದವರು ಎಂದೆಂದಿಗೂ ಅಲ್ಲಿಯೇ ಉಳಿದುಕೊಳ್ಳುತ್ತಾರೆ.

ಅಧ್ಯಕ್ಷರು.—ಇಲ್ಲಿ ಎಲೆಕ್ಷನ್ ಭಾಷಣ ಏಕೆ ?

ಶ್ರೀ ಎನ್. ಜಿ. ನರಸಿಂಹೇಗೌಡ.—ನಾನೇನೂ ಎಲೆಕ್ಷನ್ ಸ್ಪೀಚ್ ಮಾಡುತ್ತಿಲ್ಲ.

Mr. SPEAKER.—The House will now rise for lunch and meet again after half-an-hour.

The House adjourned for recess at Thirty Minutes past Twelve of the Clock and reassembled at Three of the Clock.

[Mr. SPEAKER in the Chair]

ಶ್ರೀ ಎನ್. ಜಿ. ನರಸಿಂಹೇಗೌಡ.—ನನ್ನ ಭಾಷಣ ಮುಗಿದಿಲ್ಲ ನನಗೆ ಇನ್ನು 15 ನಿಮಿಷ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು.—ವೇಳೆ ಆಗಿದೆ ಹೆಚ್ಚು ಸಮಯವಿಲ್ಲ. ಎರಡು ಮೂರು ನಿಮಿಷಗಳಲ್ಲಿ ತಾವು ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಎನ್. ಜಿ. ನರಸಿಂಹೇಗೌಡ.—ಸ್ವಾಮಿ, ಅನೇಕ ಸಾರೆ ಫಾಮಿನ್‌ಗೋಸ್ಕರ ಹೊಸ ಕೋಡ್ ಮಾಡಬೇಕು ಎಂದು ಸಲಹೆ ಮಾಡಿದರೂ ಕೂಡ ಸರಕಾರ ಅದನ್ನು ಮಾಡುವುದಕ್ಕಾಗಿಲ್ಲ. 57 ಲಕ್ಷ ರೂಪಾಯಿ ಇದಕ್ಕಾಗಿ ಇಟ್ಟಿದೆ ಕಳೆದ ನಾಲ್ಕು ವರ್ಷಗಳಿಂದ ಕೆಲವು ಜಿಲ್ಲೆಗಳಲ್ಲಿ ಫಾಮಿನ್ ತಲೆದೋರುತ್ತಾ ಇದ್ದರೂ ಸಹ ಅದನ್ನು ತಡೆಗಟ್ಟಲಿಕ್ಕೆ ಹೊಸ ಕೋಡು ಇದುವರೆಗೆ ಮಾಡಿಲ್ಲ. ಇನ್ನು ಫಾಮಿನ್ ಕೋಡ್ ಮಾಡುತ್ತಾರೆಂದು ನಂಬಿದ್ದೇನೆ.

ಇನ್ನು ಸಾಂಡಲ್‌ವುಡ್ ವಿಚಾರದಲ್ಲಿ ನೋಡಿದರೆ ಬಹಳ ದಿವಸಗಳ ಹಿಂದಿನ ಹಳೇ ರೇಟ್ ಇಂದಿಗೂ ಇಟ್ಟು ಲೆಕ್ಕ ಮಾಡುತ್ತಾರೆ.

ಅಧ್ಯಕ್ಷರು.—ಸ್ಯಾಂಡಲ್‌ವುಡ್ ವಿಷಯ ಚರ್ಚೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆ ವಿಷಯವನ್ನು ಕುರಿತು ಮಾತನಾಡಲು ಆಗುವುದಿಲ್ಲ, ವರದಿಯಲ್ಲಿ ಏನಿದೆಯೋ ಅದರ ಮೇಲೆ ಮಾತ್ರ ಮಾತನಾಡಬಹುದು. ಬೇರೆ ಸಾಮಾನ್ಯ ವಿಷಯ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎನ್. ಜಿ. ನರಸಿಂಹೇಗೌಡ.—ಪಬ್ಲಿಕ್ ವರ್ಕ್ಸ್ ಡಿಪಾರ್ಟುಮೆಂಟಿನಲ್ಲಿ in time ಕೆಲಸ ಮಾಡದೆ ಹಣ lapse ಆಗಿದೆ.

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ, ರಿಪೋರ್ಟಿನಲ್ಲಿ ಪ್ರೊಸೀಜರ್ ತಪ್ಪು ಎಂದು ಇಷ್ಟೇ ಹೇಳಿದ್ದಾರೆ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಪ್ರೊಸೀಜರ್ ಹೇಗೆ ತಪ್ಪಾಗಿದೆ ಅದನ್ನೇ ಹೇಳುತ್ತೇನೆ. ಅನೇಕ ಕೆಲಸಗಳು ಸರಿಯಾಗಿ ಮಾಡದೇ ಇರುವುದಕ್ಕೆ, ಆಡಳಿತ ದೃಷ್ಟಿಯಲ್ಲಿ ಪೂರ್ತಿ ವ್ಯತ್ಯಾಸವಾಗಬೇಕಾಗಿದೆ. ಅನೇಕ ಲೋಪದೋಷಗಳಿವೆ ಅವುಗಳನ್ನು ಸರಿಪಡಿಸುವುದಕ್ಕೆ ಅವಕಾಶ ಕೊಟ್ಟಿಲ್ಲ. ಇದನ್ನು ಕಾಂಗ್ರೆಸ್ಸಿನಲ್ಲಿರತಕ್ಕ ನಿಮ್ಮವರೇ ಹೇಳಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ನಿಮ್ಮವರು ನಮ್ಮವರು ಎಂದು ಅಧ್ಯಕ್ಷರಿಗೆ ಅಡ್ರೆಸ್ ಮಾಡಬಹುದೇ ?

ಶ್ರೀ ಎಸ್. ಜಿ. ನರಸಿಂಹೇಗೌಡ.—ಈ ಕಮಿಟಿಯ ಚೇರಮನ್ ನಿಮ್ಮವರೇ ಆಗಿದ್ದಾರೆ. ಆಡಳಿತದಲ್ಲಿ ನ್ಯೂನತೆಗಳು ಆಗಾಗ್ಗೆ ಹೆಚ್ಚುತ್ತಾ ಇರುವದರಿಂದ ಪ್ರತಿವರ್ಷ ಕಾಂಗ್ರೆಸ್ಸಿಗರ ಶಕ್ತಿ ಕುಂದುತ್ತಾ ಬಂದಿದೆ.

ಅಧ್ಯಕ್ಷರು :—ಈ ರಿಪೋರ್ಟಿನಲ್ಲಿ ಇಲ್ಲದೇ ಇದ್ದ ವಿಷಯದಮೇಲೆ ಮಾತನಾಡುವುದು ಸರಿಯಲ್ಲ, ಇಲ್ಲಿ ಇರುವುದು ಒಂದು ಅವರು ಹೇಳುವುದು ಮತ್ತೊಂದು, ಇದು serious ತಪ್ಪು ಅಲ್ಲ "regularise" ಮಾಡಬೇಕೆಂದು ರಿಪೋರ್ಟಿನಲ್ಲಿ ಹೇಳಿದ್ದಾರೆ ಆ ವಿಚಾರ ಮಾತ್ರ ಹೇಳಬೇಕು.

ಶ್ರೀ ಎಸ್. ಜಿ. ನರಸಿಂಹೇಗೌಡ.—ರೂಲಿಂಗ್ ಪಾರ್ಟಿ ಈ ತಪ್ಪು ಮಾಡಿದ್ದಾರೆ. ಇಲ್ಲವಾದರೆ ಯಾರು ಮಾಡಿದ್ದಾರೆ ? ಅದಕ್ಕಾಗಿ ಹೇಳುತ್ತೇನೆ. ಕೊನೆಯದಾಗಿ ಈಗ ಈ ಕಮಿಟಿಯವರು ಈ ವರದಿಯಲ್ಲಿ ಎತ್ತಿಹಿಡಿದಿರುವ ಲೋಪದೋಷಗಳೇನಿರುತ್ತವೆ ಅವುಗಳನ್ನು ಸರ್ಕಾರದವರು ಕೂಡಲೆ ಸರಿಪಡಿಸಲು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆಂಬ ಬಗ್ಗೆ ಈ ಮಾನ್ಯ ಸಭೆಯ ಸದಸ್ಯರುಗಳಿಗೆ ಒಂದು ಪಟ್ಟಿಯನ್ನು ಒದಗಿಸುತ್ತಾರೆಂದು ಆಶಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಂ. ಸಿ. ನರಸಿಂಹನ್ (ಕೋಲಾರ ಗೋಲ್ಡ್ ಫೀಲ್ಡ್ಸ್).—ಅಧ್ಯಕ್ಷರೇ, ಈಗಾಗಲೆ ವಿರೋಧಪಕ್ಷದ ನಾಯಕರು ವಿವರವಾಗಿ ತಿಳಿಸಿರುವಂತೆ ನಮ್ಮ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆಂಬ ವಿಚಾರದಲ್ಲಿ ಯಾರಿಗೂ ಯಾವ ಸಂಶಯವನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ. ಅದಾಗ್ಯೂ ಈ ದಿವಸ ಈ ಸಭೆಯ ಸದಸ್ಯರಾದ ಶ್ರೀ ಮೊಹಸೀನ್ ರವರಿಗೆ ಈ ರಿಪೋರ್ಟಿನ ಮೇಲೆ ಮಾತನಾಡಲು ಅವಕಾಶ ಸಿಕ್ಕಿತ್ತು. ಆದರೆ ಅವರಿಗೆ ಆ ಅವಕಾಶ ತಪ್ಪಿದೆ ಹೋಗಿದ್ದರೆ ಅವರು ಈ ವರದಿಯನ್ನು ವಿರೋಧಿಸತಕ್ಕ ಧಾಷ್ಟ್ರ್ಯತ್ವ ಅವರಿಗೆ ಎಲ್ಲಿಯವರೆಗಿತ್ತು ಎಂಬುದನ್ನು ನಾವು ನೋಡಬಹುದಾಗಿತ್ತು. ಆದರೆ ಅವರಿಗೆ ಮಾತನಾಡುವ ಅವಕಾಶ ತಪ್ಪಿದ್ದರಿಂದ ಅದನ್ನು ನೋಡಲು ನಮಗೆ ಅವಕಾಶವಾಗದೆ. ಇದ್ದುದಕ್ಕೆ ನಾವು ವಿಷಾದಪಡಬೇಕಾಗಿದೆ. ಈಗ ನಮ್ಮ ಮುಂದಿರತಕ್ಕ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿ ವಿಚಾರದಲ್ಲಿ ನಾವು ಒಂದು ಅಂಶವನ್ನು ಗಮನಿಸಬೇಕಾಗಿದೆ. ಅದೇನೆಂದರೆ ಈಗ ಈ ಕಮಿಟಿಗೆ ಅಧ್ಯಕ್ಷರಾಗಿರತಕ್ಕವರು ಈ ಹಿಂದೆ ಇದೇ ಸರ್ಕಾರದಲ್ಲಿ ಮಂತ್ರಿಗಳಾಗಿದ್ದರು ಎನ್ನುವುದು ಬಹಳ ಮುಖ್ಯವಾದ ವಿಚಾರ. ಈ ದಿವಸ ಈ ವರದಿಯಲ್ಲಿ ಟೀಕೆ ಮಾಡಿರತಕ್ಕ ವಿಷಯಗಳಲ್ಲಿ ಕೆಲವು ಅವರು ಹಿಂದೆ ಮಂತ್ರಿಗಳಾಗಿದ್ದ ಕಾಲಕ್ಕೆ ಅನ್ವಯಿಸತಕ್ಕವುಗಳಾಗಿದ್ದಾಗ್ಯೂ ಅವುಗಳ ಬಗ್ಗೆ ಬರಬಹುದಾದ ಟೀಕೆ ಟಿಪ್ಪಣಿಗಳಿಗೆ ಅವರು ಹಿಂದೆಗೆದಿದೆ ಈ ವಿಚಾರಗಳನ್ನೆಲ್ಲ ನಮ್ಮ ಗಮನಕ್ಕೆ ತಂದಿದ್ದಾರೆ. ಆದರೆ ಅವರು ಒಂದು ಸರ್ವೇಸಾಮಾನ್ಯ ರೀತಿಯಲ್ಲಿ ಈ ವರದಿಯಲ್ಲಿ ಕೆಲವು ವಿಚಾರಗಳನ್ನು ತಿಳಿಸಿರುವುದರಿಂದ ನಾವು ಸ್ವಲ್ಪ ಆಳವಾಗಿ ಆಲೋಚಿಸಿದರೆ ನಮ್ಮ ಆಡಳಿತದ ಸ್ಥಿತಿಗತಿಗಳು ಇನ್ನೂ ಬಹಳ ಗಂಭೀರವಾದ ಪರಿಸ್ಥಿತಿಯಲ್ಲಿರುತ್ತವೆ ಎಂಬುದಾಗಿ ನನಗೆ ಅರ್ಥವಾಗುತ್ತದೆ. ಆ ಕಮಿಟಿಯವರು ಅಲ್ಲಲ್ಲೇ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಅವರು ಈ ವರದಿಯಲ್ಲಿ ಒಂದು ಸರ್ವೇಸಾಮಾನ್ಯ ರೀತಿಯಲ್ಲಿ ತಿಳಿಸಬೇಕೆಂದು ಹೊರಟಿರತಕ್ಕ ಮಾರ್ಗದಲ್ಲೇ ಪರಿಸ್ಥಿತಿ

ಇಷ್ಟು ಗಂಭೀರವಾಗಿದ್ದರೆ ಬಾಕಿವಿಚಾರವೇನಾಗಿರಬೇಕು ಎಂಬುದರ ಅರಿವನ್ನು ಈ ಮಾನ್ಯ ಸಭೆಯು ಗಮನಕ್ಕೆ ತರಲು ನಾನು ಮೊದಲನೆಯದಾಗಿ ಈ ವರದಿಯ ಪ್ಯಾರಾ 72 ರಲ್ಲಿ ಸೂಚಿಸಿರತಕ್ಕ ವಿಷಯವನ್ನು ಈಗ ಪ್ರಸ್ತಾಪಿಸಲು ಇಚ್ಛಿಸುತ್ತೇನೆ.

Para 72 on page 46:—

" In cases where action should have been taken against the delinquent officers but was not taken in time, the offices responsible for omitting and delaying to take action and treating the matter in a light-hearted manner should be suitably punished............"

ಇದು ಒಂದು ಸರ್ವೇಸಾಧಾರಣವಾದ ವಿಚಾರ ಎಂತ ಹೇಳಲು ಕೇವಲ ಒಂದು ವರ್ಷಕ್ಕೆ ಸಂಬಂಧಿಸಿದ ವಿಚಾರವಲ್ಲ. ಆದಾಗ್ಯೂ ಹಣಕಾಸಿನ ಸಚಿವರು ನಮಗೆ ಸ್ಟೇಟ್ ರೀ-ಆರ್ಗನೈಜೇಷನ್ ಆದ ಪ್ರಯುಕ್ತ ತೊಂದರೆಯಿತ್ತು ಅಂತ ಹೇಳಬಹುದು. ಆ ಸಮಜಾಯಿಷಿಕೆಯನ್ನು ಅವರು ಆ ಒಂದು ವರ್ಷಕ್ಕೆ ಕೊಟ್ಟರೆ ಪರವಾಇಲ್ಲ. ಆದರೆ ಅದನ್ನೇ ಒಂದು ನೆಪಮಾಡಿ ಕೊಂಡು ಎಲ್ಲ ವರ್ಷಗಳಿಗೂ ಹೇಳುತ್ತಾರೇನೋ ಎಂಬ ಶಂಕೆ ಬೇರೆ ನನಗಿದೆ.

ಶ್ರೀ ಟಿ. ಮರಿಯಪ್ಪ.—ಆ ಉತ್ತರ ಕೊಡತಕ್ಕ ಕಾಲ ಮುಗಿದು ಬಹಳ ದಿನಗಳಾಯಿತು.

ಶ್ರೀ ಎಂ. ಸಿ. ನರಸಿಂಹನ್.—ಈ ವರದಿಯ ಮೇಲೆ ಚರ್ಚೆ ಪ್ರಾರಂಭವಾದಾಗ ಮಾನ್ಯ ರಾ-ಸಚಿವರೂ ಮತ್ತು ಇನ್ನಿತರ ಕೆಲವು ಮಂತ್ರಿಗಳೂ ಭಾಷಣ ಮಾಡುತ್ತಿದ್ದ ಸದಸ್ಯರಿಗೆ ಒಂದೆರಡು ನಿದರ್ಶನಗಳನ್ನು ಕೊಡುತ್ತೀರಾ ಎಂತ ಕೇಳತ್ತಿದ್ದರು. ಒಂದೆರಡು ನಿದರ್ಶನಗಳೇಕೆ ಕಳೆದ ಐದು ವರ್ಷಗಳಿಂದ ವಿರೋಧ ಪಕ್ಷದವರು ಸರ್ಕಾರ ನಡೆಸುತ್ತಿರುವ ಆಡಳಿತದ ಬಗ್ಗೆ ಏನೇನು ಟೀಕೆಗಳನ್ನು ಮಾಡಿದ್ದಾರೋ ಅವುಗಳೆಲ್ಲ ಸತ್ಯವಾದವುಗಳೆಂಬುದಕ್ಕೆ ಈ ವರದಿಯೇ ಒಂದು ಉದಾಹರಣೆಯಾಗಿದೆ. ಈ ಹಿಂದೆ ಈ ವಿರೋಧ ಪಕ್ಷದ ಸದಸ್ಯರು ಆಡಳಿತದಲ್ಲಿರುವ ಅಧ್ಯಕ್ಷತೆ, ಲಂಚಗುಳಿತನ ಇತ್ಯಾದಿಗಳ ಬಗ್ಗೆ ಏನಾದರೂ ಮಾತೆತ್ತಿದರೆ ಹಣಕಾಸಿನ ಸಚಿವರೂ ಮತ್ತು ಗೃಹಮಂತ್ರಿ ಶ್ರೀ ಚನ್ನಬಸಪ್ಪನವರೂ ಕಿಡಿಕಿಡಿಯಾಗುತ್ತಿದ್ದರು ಆದರೆ ಈಗ ಇಂಥ ಒಂದು ಗಂಭೀರ ಪರಿಸ್ಥಿತಿ ಬಂದು ಒದಗಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಪ್ಯಾರಾ 72 ರಲ್ಲಿ ಹೀಗೆ ಹೇಳಿದೆ:

" The committee wish to emphasise that a sense of consciousness of the reponsibility for proper spending and accountal of money should pervade the minds of Departmental Heads at all times and travel down to lowest officials responsible for estimating, spending and accounting."

ಹೀಗೆ ಹೇಳುವುದರಿಂದ ನಾವು ಯಾವ ಒಂದು ತೀರ್ಮಾನಕ್ಕೆ ಬರಬಹುದೆಂದರೆ ದೇಶಾಡಳಿತ ನಡೆಸ ತಕ್ಕ ಸರ್ಕಾರದ ಮನೋಭಾವನೆಗಳು ಯಾವ ರೀತಿಯಿರುತ್ತದೆ ಎಂದರೆ ಈ ಸರ್ಕಾರದವರಿಗೆ ದೇಶಾಡಳಿತ ವಿಚಾರದಲ್ಲಿ ಒಂದು ಜವಾಬ್ದಾರಿಯುತವಾದ ಮನೋಭಾವನೆಯಿಂದ ವರ್ತಿಸ ಬೇಕೆಂಬ ಉದ್ದೇಶವಿಲ್ಲ ಎಂದು ನಾನು ಹೇಳುವುದಕ್ಕೆ ಈ ಒಂದು ಉದಾರಣೆಯೇ ಸಾಕು.

ಶ್ರೀ ಎಚ್. ಕೆ. ವೀರಣ್ಣಗೌಡ.—ಮಾನ್ಯ ಸದಸ್ಯರು ವರದಿಯಲ್ಲಿ ಕೊಟ್ಟಿರತಕ್ಕ ವಿಚಾರ ವನ್ನು ಟೆಸ್ಟ್‌ಮಾಡಿ ಹೇಳುತ್ತಿದ್ದಾರೆ.

ಶ್ರೀ ಎಂ. ಸಿ. ನರಸಿಂಹನ್.—ಹಾಗೇ ಇನ್ನೊಂದು ಉದಾಹರಣೆ ಹೇಳುತ್ತೇನೆ. ಈ ಷಿಫ್ಟಿಂಗ್ ಆಫ್ ರೆಸ್‌ಪಾನ್ಸಿಬಿಲಿಟಿ ವಿಚಾರದಲ್ಲೂ ಬಹಳ ಗಂಭೀರವಾಗಿ ಹೇಳಿದ್ದಾರೆ. ಯಾವುದಾದರೂ ಒಂದು ಇಲಾಖೆಯವರು ಏನಾದರೂ ತಪ್ಪು ಮಾಡಿದ್ದರೆ ಏತಕ್ಕೆ ಹೀಗೆ ತಪ್ಪು

(ಶ್ರೀ ಎಂ. ಸಿ. ನರಸಿಂಹನ್)

ಮಾಡಿದ್ದೀರಿ ಎಂತ ಆ ಇಲಾಖೆಯವರನ್ನು ಕೇಳದೆ ಕೈಬಿಟ್ಟು ಆ ತಪ್ಪನ್ನು ಬೇರೆ ಒಂದು ಇಲಾಖೆಗೆ ಷಿಫ್ಟ್ ಮಾಡಲು ಹವಣಿಸಿರುತ್ತಾರೆ ಇದು ಬಹಳ ಶೋಚನೀಯವಾದ ವಿಚಾರ.

On page 15, Para 22 :

> "The Committee noticed similar tendency on the part of a few other Departments as well to refute the facts embodied in the Audit Reports which are, as the Committee were told by the Accountant General, included therein after the statement of facts had been verified by the Executive. The Committee strongly disapprove of the failure of certain Departments in arranging for the timely verification of facts proposed to be incorporated in the Audit Report and subsequent attempt on the part of the representatives of the Departments to contradict any statement contained in the Audit Reports at the time they appear before the Public Accounts Committee."

ಎಂತ ಹೇಳಿದರೆ ಆಡಿಟರ್ ಜನರಲ್‌ರವರ ಮುಂದೆ ಒಂದು ತರಹ ಹೇಳಿಕೆಯನ್ನು ಕೊಟ್ಟು ಅನಂತರ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರ ಮುಂದೆ ಬೇರೊಂದು ರೀತಿಯ ಹೇಳಿಕೆಯನ್ನು ಕೊಟ್ಟಿದ್ದಾರೆ. ಮತ್ತೆ ಯಾರಾದರೂ ಅವರನ್ನು ವಿಚಾರಣೆ ಮಾಡಿದರೆ ಅವರ ಮುಂದೆ ಬೇರೆ ಇನ್ನಾವುದು ಒಂದು ಹೇಳಿಕೆಯನ್ನು ಕೊಡಬಹುದು. ಹೀಗೆ ಒಬ್ಬೊಬ್ಬರಮುಂದೆ ಒಂದೊಂದು ರೀತಿ ಹೇಳಿಕೆ ಕೊಡತಕ್ಕ ಮನೋಭಾವನೆ ಏನಿದೆ ಇದು ದೇಶಕ್ಕೆ ಬಹಳ ಅಪಾಯಕಾರಿಯಾದದ್ದು. ಆಡಳಿತದಲ್ಲಿ ಇಂಥ ಒಂದು ಅಪಾಯಕಾರಿ ಮನೋಭಾವ ಬೆಳೆದು ಬರುತ್ತಿದೆ. ಈ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರಿಂದ ಹೊರಬೀಳತಕ್ಕ ಅಭಿಪ್ರಾಯಗಳಲ್ಲಿ ಇದು ಬಹಳ ಸೂಕ್ಷ್ಮವಾದ ವಿಚಾರ. ಇದನ್ನು ಮಾನ್ಯಸದಸ್ಯರೆಲ್ಲರೂ ಚೆನ್ನಾಗಿ ಗಮನಿಸಬೇಕು. ಒಟ್ಟಿನಲ್ಲಿ ಕಳೆದ 5 ವರ್ಷಗಳಿಂದ ವಿರೋಧಪಕ್ಷದವರೇನು ಹೇಳುತ್ತಿದ್ದಾರೋ ಅದೆಲ್ಲವನ್ನು ಸಾಬೀತು ಮಾಡುವ ರೀತಿಯಲ್ಲದೆ ಈ ವರದಿ ಎನ್ನತಕ್ಕ ಅಂಶವನ್ನು ನಾನೀಗ ಈ ಮಾನ್ಯಸಭೆಯ ಗಮನಕ್ಕೆ ತರಲಚ್ಛಿಸುತ್ತೇನೆ.

3-30 P.M.

ಒಂಭತ್ತನೆಯ ಪುಟ, 16ನೆಯ ಪ್ಯಾರಾದಲ್ಲಿ ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟ್ ಬಗ್ಗೆ ಹೀಗೆ ಹೇಳಿದ್ದಾರೆ.

> "...Notwithstanding these requirements the committee were surprised to not that several works are being excuted year after year without sanction to the estimates and no positive action has been taken to regularise them.. The Committee are not inclined to view this irregularity by itself as very serious provided that the departmental officers concerned take prompt measures."

ಇದನ್ನು ಕೂಡ generalisation ಎಂದು ಗಮನಿಸಬೇಕು. ಯಾವುದೋ ಒಂದು ಸೇತುವೆ ಕಟ್ಟಲಿಲ್ಲ. ಯಾರೋ ಒಬ್ಬ clerk ಏನೋತಪ್ಪು ಮಾಡಬಿಟ್ಟ ಎನ್ನುವ ಮನೋಭಾವನೆಯಿಂದ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಈ ವಿಚಾರವನ್ನು ಹೇಳುತ್ತಿಲ್ಲವೆಂದು ನಾನು ನಿಮ್ಮ ಗಮನಕ್ಕೆ ತರಲು ಆಸೆ ಪಡುತ್ತೇನೆ.

ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಏನು ಹೇಳಿದ್ದಾರೆ ಎಂದರೆ ಹೆಚ್ಚು ಬೃಹದಾಕಾರದ ಯೋಜನೆಗಳಿರುವುದರಿಂದ ಆಡಳಿತದಲ್ಲಿ ದಕ್ಷತೆ ಹೆಚ್ಚಬೇಕು ಎಂದು ಹೇಳಿದ್ದಾರೆ. ಎಲ್ಲ

ರೀತಿಯಲ್ಲಿಯೂ ಕೂಡ ದಕ್ಷತೆ ಹೆಚ್ಚಬೇಕು, efficiency and integrity ಎಲ್ಲವೂ ಹೆಚ್ಚ ಬೇಕು ಎಂದು ಹೇಳಿದ್ದಾರೆ. ಗೋರವಾಲಾರ ರಿಪೋರ್ಟಿನಲ್ಲಿ ಕೂಡ ಇದನ್ನೇ ಹೇಳಿದ್ದಾರೆ. ಗೋರವಾಲಾರವರ ರಿಪೋರ್ಟ್ ಚರ್ಚೆಗೆ ಬಂದಾಗ ಮಾನ್ಯ ಹಣಕಾಸಿನ ಮಂತ್ರಿಗಳಾದ ಶ್ರೀಮಾನ್ ಮರಿಯಪ್ಪನವರು ಅದನ್ನು ಒಪ್ಪಿಕೊಳ್ಳಲಿಲ್ಲ. ಮೂರು ವರ್ಷಗಳನಂತರ ಇವರೂ ಸಹ ಅದನ್ನೇ ಹೇಳಿದ್ದಾರೆ.

ಪಬ್ಲಿಕ್ ಅಕೌಂಟ್ಸ್ ಸಮಿತಿಯವರ ವರದಿಗಳನ್ನು ಅಥವಾ ಅದು ಕೊಟ್ಟಂಥ ಸೂಚನೆ ಗಳನ್ನು ದುರ್ಲಕ್ಷ್ಯ ಮಾಡಬೇಕು, ಅಲಕ್ಷ್ಯ ಮಾಡಬೇಕು ಎನ್ನುವ ಮನೋಭಾವವಿದ್ದಂತೆ ಕಾಣು ವುದಿಲ್ಲವೆಂದು ಶ್ರೀಮಾನ್ ಕೊತಾವಳೆ ಅವರು ಹೇಳಿದರು. ಅದು ಮಾತ್ರ ಸರಿಯಲ್ಲವೆಂದು ಹೇಳಬೇಕು, ಅದಕ್ಕೆ ಎರಡು ಮೂರು ವಿಷಯಗಳನ್ನು ತೋರಿಸಿಕೊಡುತ್ತೇನೆ. ಪುಟ 6, ಪ್ಯಾರ 11ರಲ್ಲಿ "year after year, the committee have been expressing their displeasure over the deteriorating position regarding the mounting audit objections" ಎಂದು ಹೇಳಿದ್ದಾರೆ ಇದರಲ್ಲಿ ಬಹು ಮುಖ್ಯವಾಗಿ ಗಮನಿಸಬೇಕಾದ್ದು ಏನೆಂದರೆ ನಮ್ಮ ಅದೃಷ್ಟವಶಾತ್ ಶ್ರೀಮಾನ್ ಮರಿಯಪ್ಪನವರು ಇಲ್ಲಿ ಹಣಕಾಸಿನ ಮಂತ್ರಿಗಳಾಗಿ ಮುಂದುವರಿಯುತ್ತಿದ್ದಾರೆ. ಶ್ರೀ ನಿಜಲಿಂಗಪ್ಪನವರಿಗೆ ತಟ್ಟಿದ ದುರದೃಷ್ಟ ವಾಗಲಿ ಅಥವಾ ಶ್ರೀಮಾನ್ ಜತ್ತಿಯವರಿಗೆ ತಟ್ಟ ಬಹುದಾಗಿದ್ದ ದುರದೃಷ್ಟವಾಗಲೀ ಇವರಿಗೆ ತಟ್ಟಲಿಲ್ಲ. ಪ್ರತಿವರ್ಷವೂ ಕಮಿಟಿಯವರು ತಮ್ಮ ಅಸಂತುಷ್ಟಿಯನ್ನು ವ್ಯಕ್ತಪಡಿಸುತ್ತಿದ್ದಾರೆಂದ ಮೇಲೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ? ಇದೇ ಪ್ಯಾರದಲ್ಲಿ ಕಮಿಟಿಯವರು ಮುಂದೆ ಹೇಳಿರುವುದನ್ನು ನೋಡಿದರೆ ಯಾವುದನ್ನು ಅಕ್ಷರಶಃ ಸರ್ಕಾರದವರು ಪಾಲಿಸಲಿಲ್ಲವೆಂದು ಕಾಣುತ್ತದೆ. ಇನ್ನು ಮುಂದೆ ನೋಡಿದರೆ ಹೀಗೆ ಹೇಳಿದ್ದಾರೆ.

> "The committee were surprised when some of the departmental officers attributed the slow progress in clearing the audit objections to transfer of officers which is shockingly absurd and not befitting any administration."

ಆಮೇಲೆ ಅಧಿಕಾರಿಗಳ transfer ವಿಷಯ ಹೇಳಿದ್ದಾರೆ. ಇದರಲ್ಲಿ ಪಬ್ಲಿಕ್ ಅಕೌಂಟ್ಸ್ ಕಮಿಟಿ ಯವರು ಒಂದು ಹೆಜ್ಜೆ ಮುಂದೆ ಹೋಗಬಾರದಾಗಿತ್ತು ಎಂದು ಕಾಣುತ್ತದೆ. ಟ್ರಾನ್ಸ್‌ಫರ್ಸ್ Cancel ಮಾಡುವವರು ಯಾರು ? ಇದಕ್ಕೆ ಸಂಬಂಧಪಟ್ಟವರು ಯಾರು ? ಶಾಸನ ಸಭಾಸದಸ್ಯರೇ ಅಥವಾ ಕಾಂಗ್ರೆಸ್ ಪುಡಾರಿಗಳೇ ? ಇದರಲ್ಲಿ ಸಂಶಯವಿದೆ. ಸ್ವಾಮಿ, ನಾನೇನಾದರೂ ಹೋಗಿ ಹೇಳಿದರೆ, Communist Officer ಎಂದು transfer ಮಾಡಲಾರರೆಂದು ನಾನು ಯಾರಲ್ಲಿಯೂ ಹೋಗುತ್ತಿಲ್ಲ.

ಶ್ರೀ ಟಿ. ಮರಿಯಪ್ಪ.—ಕೆಲವು ಅಧಿಕಾರಿಗಳಿಗೆ ಅನಾನುಕೂಲಗಳಿರುತ್ತವೆ. ಅಂಥ ಸಂದರ್ಭಗಳಲ್ಲಿ ಏನು ಮಾಡಬೇಕು.

ಶ್ರೀ ಎಂ. ಸಿ. ನರಸಿಂಹನ್.—ಶ್ರೀಮಾನ್ ಬೋರಣ್ಣಗೌಡರು ಮತ್ತು ಶ್ರೀಮಾನ್ ಲಿಂಗಾರೆಡ್ಡಿಯವರು, ಮಂತ್ರಿಗಳಾಗುವುದಕ್ಕೆ ಮುಂಚೆ ಈ ಸಭೆಯಲ್ಲಿ ಕೇಳಿದ್ದ ಪ್ರಶ್ನೆಗಳನ್ನು ತೆಗೆದು ನೋಡಿದರೆ ಈ ವಿಚಾರ ಗೊತ್ತಾಗುತ್ತದೆ. ಕೆಲವು ಅಧಿಕಾರಿಗಳು ಚುನಾವಣೆಗಳಲ್ಲಿ ಇವ ರಿಗೆ ವಿರೋಧವಾಗಿ ಕೆಲಸ ಮಾಡಿದರೆಂದು ಅವರನ್ನು ಏಕೆ ವರ್ಗಮಾಡಲಿಲ್ಲವೆಂದು ಕೇಳಿದ್ದಾರೆ. ಸಕಲೇಶಪುರದಲ್ಲಿ ಒಬ್ಬ ಸಬ್‌ಇನ್‌ಸ್ಪೆಕ್ಟರನ್ನು ಏಕೆ ವರ್ಗಮಾಡಲಿಲ್ಲವೆಂದು ಅವರು ಪ್ರಶ್ನೆ ಕೇಳಿದ್ದಾರೆ.

(ಶ್ರೀ ಎಂ. ಸಿ. ನರಸಿಂಹನ್)

ಪುಟ 8, ಪ್ಯಾರಾ 14ರಲ್ಲಿ "......the transfer of control of the divisional Accountants (at present under the State Grovernment) to the Comptroller and Auditor General of India" ಎಂದು ಹೇಳಿದ್ದಾರೆ. ಇದನ್ನು ಹಿಂದಿನ ಕಮಿಟಿಯವರೂ ಹೇಳಿದ್ದರು ಎನ್ನುವುದಕ್ಕೆ ಆ ವರದಿಯ extract ನ್ನೂ ಸಹ ಕೊಟ್ಟಿದ್ದಾರೆ. ಆದರೂ ಸಹ ಸರ್ಕಾರದವರು ಇದಕ್ಕೆ ಲಕ್ಷ್ಯ ಕೊಟ್ಟಿಲ್ಲ, ಮತ್ತು ಇದನ್ನು ವಿರೋಧ ಮಾಡಬೇಕೆನ್ನುವ ಮನೋಭಾವವಿದೆ ಎನ್ನುವುದು ಗೊತ್ತಾಗುತ್ತದೆ. ಏಕೆ ಹೀಗಾಯಿತು ಎನ್ನುವ ವಿವರಣೆಯನ್ನು ಕೊಡಬೇಕು ಎರಡು ಮೂರು ಕಮಿಟಿಗಳ ಹೇಳಿದಾಗ ಏಕೆ ಆ ಪ್ರಕಾರ ಕ್ರಮ ತೆಗೆದುಕೊಳ್ಳಲಿಲ್ಲ. ಹಿಂದಿನ ಕಮಿಟಿಗಳಲ್ಲಿ ಶ್ರೀಮಾನ್ ಮರಿಯಪ್ಪನವರೂ ಇದ್ದರು ಎಂದು ಕಾಣುತ್ತದೆ.

Sri T. MARIAPPA.—Sir, the divisional accountants were under the Chief Egineer. They are now placed under the Controller of State Accounts; they were practically working under the Executive Engineers.

ಶ್ರೀ ಎಂ. ಸಿ. ನರಸಿಂಹನ್.—ಪ್ಯಾರ 43ರಲ್ಲಿ "......the Committee in one of their earlier reports and it is surprising that in State of the specific provision in the financial Code permitting parallel enqniry—"

ಇದನ್ನು enquiry ಮಾಡಬೇಕು, disciplinary action ತೆಗೆದುಕೊಳ್ಳಬೇಕು, ಎನ್ನುವ ವಿಷಯದಲ್ಲಿ ಮತ್ತೆ ಸೂಚಿಸಿದ್ದಾರೆ. ಇನ್ನೊಂದು ಆಶ್ಚರ್ಯನೇವೆಂದರೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರಿಗೆ ಕೆಲವು ವಿಷಯಗಳನ್ನು ತಿಳಿಸಲಿಲ್ಲವೆನ್ನುವುದು ಮಾತ್ರವಲ್ಲ, ಅಕೌಂಟೆಂಟ್ ಜನರಲ್‌ಗೆ ಸಹ ತಿಳಿಸಲಿಲ್ಲ.

ಪ್ಯಾರಾ 44ರಲ್ಲಿ ಸಹ ಅಂಥದೇ ವಿಷಯವನ್ನು ತಿಳಿಸಿದ್ದಾರೆ :—

> "The payment of the second instalment even before the utilisation of the first instalment is on the face of it contrary to law."

ಶ್ರೀ ಜಿ. ಬಿ. ಮಲ್ಲಾರಾಧ್ಯ.—ನಾನು ಆ ವಿಷಯಗಳನ್ನು ಹೇಳಿದ್ದೇನೆ.

ಪ್ಯಾರಾ 50ರಲ್ಲಿ ಇರುವ ವಿಷಯದ ಬಗ್ಗೆ ಬಹಳ ಸಲ ಆಶ್ವಾಸನೆ ಕೊಟ್ಟಿದ್ದಾರೆ. ಬಜೆಟ್ ಅಧಿವೇಶನದಲ್ಲಿ ಎಷ್ಟೋ ಸಲ ಭರವಸೆಕೊಟ್ಟಿದ್ದಾರೆ. ಇದುವರೆಗೂ ಏನೂ action ತೆಗೆದುಕೊಳ್ಳಲಿಲ್ಲವೆಂದರೆ ಅದಕ್ಕೆ ಇವರೇ ಜವಾಬ್ದಾರರು.

ಶ್ರೀ ಎಂ. ಸಿ. ನರಸಿಂಹನ್.—ಹೀಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟಿನ ಶಿಫಾರ್ಸುಗಳನ್ನು ಇಲ್ಲಿ ಹಲವಾರು ತೋರಿಸಿದ್ದಾರೆ. ಆದರೆ ಸರ್ಕಾರದವರು ಒಂದು ವಿಷಯದಲ್ಲೂ ಸರಿಯಾಗಿ ಗಮನಿಸಿಲ್ಲವೆಂದು ನನಗೆ ಸ್ಪಷ್ಟವಾಗಿ ಈ ವರದಿಯಿಂದ ಕಾಣುತ್ತದೆ.

ಶ್ರೀ ಜಿ. ಬಿ. ಮಲ್ಲಾರಾಧ್ಯ.—1959ರಲ್ಲಿ ಈ ಸರ್ಕಾರದವರು ಒಂದು ಆರ್ಡರನ್ನು ಪಾಸ್ ಮಾಡಿದರು. ಆ ಪ್ರಕಾರ ಡಿಪಾರ್ಟ್‌ಮೆಂಟ್ ಆಫ್ ಹೆಡ್ಸ್‌ನಿಂದ ಸರಿಯಾದ ರೆಸ್‌ಪಾನ್ಸ್ ಇಲ್ಲವೆಂದು ಅಕೌಂಟೆಂಟ್ ಜನರಲ್ ಅವರು ಒಂದು ಕಾಗದ ಬರೆದಿದ್ದಾರೆ.

ಶ್ರೀ ಎಂ. ಸಿ. ನರಸಿಂಹನ್.—ಹಾಗೆಯೇ ಮುಂದಕ್ಕೆ ಓದಿ ನೋಡಿದರೆ ಸರ್ಕಾರದವರು ಎಷ್ಟರ ಮಟ್ಟಿಗೆ ಕ್ರಮ ತೆಗೆದುಕೊಂಡಿದ್ದಾರೆಂಬುದು ಗೊತ್ತಾಗುತ್ತದೆ. ಶ್ರೀಮಾನ್ ಮರಿಯಪ್ಪನವರು ಒಳ್ಳೆಯ ಅನುಭವಸ್ಥರಾದ ಹಣಕಾಸಿನ ಮಂತ್ರಿಗಳು. ಆದರೆ experience is repitition of mistakes.

ಇನ್ನು ಓವರ್-ಬಡ್ಜೆಟಿಂಗ್ ಮತ್ತು ಸೇವಿಗ್ಸ್ ವಿಷಯವಾಗಿ ತೆಗೆದುಕೊಂಡರೆ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಹಿಂದಿನ ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿಯ ಪ್ರಕಾರ ಓವರ್ ಬಡ್ಜೆಟಿಂಗ್ ಆಗಕೂಡದು ಎಂದು ಹೇಳಿದೆ. This was one of the recommendations made by the previous Public Accounts Committee of which Sri Mariappa was a member. ಅದು ಶೇಕಡ 5 ಅಥವಾ 10 ರಷ್ಟು exceed ಆಗಕೂಡದು. ಸೇವಿಂಗ್ಸ್ ಸುಮಾರು 9½ ಕೋಟಿ ಎಂದು ಹೇಳುತ್ತೀರಿ. It is definitely more than 10 per cent of the total grant extraordinarily, it is now excess ಎಂದು ಹೇಳುತ್ತೀರಿ.

ಶ್ರೀ ಟಿ. ಮರಿಯಪ್ಪ.—ಹೋದವರ್ಷದ ಬಡ್ಜೆಟ್ಟಿಗೆ ಇದನ್ನು ಕಂಪೇರ್ ಮಾಡಿ.

ಶ್ರೀ ಎಂ. ಸಿ. ನರಸಿಂಹನ್.—ಹಿಂದೆ ಬಡ್ಜೆಟ್‌ನಲ್ಲಿ 100 ಕೋಟಿಗೆ 9.5 ಕೋಟಿ ಸೇವಿಂಗ್ಸ್ ಎಂದು ಹೇಳುತ್ತೀರಿ. ಈಗ 22 ಕೋಟಿಗಳು in excess ಎಂದು ಹೇಳಿದರೆ it is an illegality. ಏನೋ ಇದು ಒಂದು ಸಣ್ಣ ವಿಷಯವೆಂದು ಬಿಟ್ಟು ಬಿಡುವುದಕ್ಕಾಗುವುದಿಲ್ಲ. Sri T. Mariappa was of the view that money should not be provided in the Budget unless they know that schemes would be given effect to. If they were not sure that the schemes would be taken up they may be omitted in the Budget. ಇನ್ನು 38ನೇ ಪುಟದಲ್ಲಿ ಹೇಳಿರುವ ಪ್ರಕಾರ ಹಿಂದೆ ಒಂದು ಸಾರಿ 1956ನೇ ಇಸವಿಯಲ್ಲಿ ಶ್ರೀಮಾನ್ ಮರಿಯಪ್ಪನವರು ಅಪ್ಪಣೆ ಕೊಡಿಸಿದರು. ಆಗ ಅವರು ವಿರೋಧ ಪಕ್ಷದಲ್ಲಿದ್ದರು. ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಅವರು ಸದಸ್ಯರಾಗಿದ್ದಾಗಲೇ ಕಾಂಗ್ರೆಸ್ಸಿಗೆ ವಿರೋಧ ಹೇಳಿದ್ದು.

ಒಬ್ಬ ಸದಸ್ಯರು.—ಕಾಂಗ್ರೆಸ್ ಸರ್ಕಾರದಲ್ಲಿ ಶ್ರೀಮಾನ್ ಮರಿಯಪ್ಪನವರು ವಿರೋಧಪಕ್ಷದಲ್ಲಿದ್ದರೇ !

ಶ್ರೀ ಎಂ. ಸಿ. ನರಸಿಂಹನ್.—ಪ್ರತಿ ಪಕ್ಷದಲ್ಲಿದ್ದುಕೊಂಡೇ ಇಂತಹ ಮನೋಭಾವವನ್ನು ತೋರಿಸಿದ್ದಾರೆ. ಅಂದಮೇಲೆ ಇಂತಹ ಒಂದು ಸಣ್ಣ ವಿಷಯವನ್ನು ಜಾರಿಗೆ ಕೊಡುವುದಕ್ಕಾಗ ಲಿಲ್ಲವೆಂದು ಇವರು ಹೇಳಿದರೆ ಇದು ಬಹಳ ವಿಷಾದಕರವಾದ ಪರಿಸ್ಥಿತಿಯೆಂದು ನಾನು ಹೇಳಬಹುದು. ಇದರಲ್ಲಿ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಕೆಲವು ಎಲಿಮೆಂಟರಿ ಅಬ್‌ಜಕ್ಷನ್ಸ್ ಬಹಳ ಹೆಚ್ಚಾಗಿವೆ. ಅವೆಲ್ಲವನ್ನೂ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬದಲಾಗಿ ಕೇವಲ ಮುಖ್ಯವಾದ ಎರಡು ವಾಕ್ಯಗಳನ್ನು ಮಾತ್ರ ಹೇಳುತ್ತೇನೆ. ಇದರಲ್ಲಿ ಪ್ಯಾರಾ 61ರಲ್ಲಿ ಈ ರೀತಿ ಹೇಳುತ್ತಾರೆ. It should have occurred even to laymen that when machinery and equipment would loose its capacity of production by efflux of time and if replacement of looms had been done well in time, the cost of production would have come down. ಇದಕ್ಕಿಂತ ಬೇಕೇ ಬೇರೆ. ಹೀಗೆ ಎಲಿಮೆಂಟರಿ ಅಬ್‌ಜಕ್ಷನ್ಸ್ ಎಷ್ಟೋ ಇವೆ.

ಇನ್ನು ಐರನ್ ಅಂಡ್ ಸ್ಟೀಲ್ ವರ್ಕ್ಸ್ ವಿಷಯ. The very fact that officers take five years to take a decision speaks volumes about their efficiency, and also of the Minister in charge of industries. ಯಾವೇ ಆಗಲೀ ಫ್ಯಾಕ್ಟರಿಗಳನ್ನು ಇಟ್ಟಿರತಕ್ಕ ಮಾಲೀಕರು 15–20 ವರ್ಷಗಳ ಮೇಲೆ ಲೂಮನ್ನು ಇಟ್ಟುಕೊಳ್ಳುವುದಿಲ್ಲ. ಅದು ರಿಪ್ಲೇಸ್‌ಮೆಂಟ್ ಆಗಬೇಕು. ಶೇ 10 ರಷ್ಟು ಡಿಪ್ರಿಸಿಯೇಷನ್ ರೇಟ್ ಪ್ರಕಾರ ಲೆಕ್ಕ ಹಾಕಬೇಕು. ಅಂದ ಮೇಲೆ 30 ವರ್ಷಗಳಾದರೂ ಕೂಡ ಅವುಗಳನ್ನು ರಿಪ್ಲೇಸ್ ಮಾಡುವುದಕ್ಕೆ ಇನ್ನೂ ಸರ್ಕಾರದವರು ಸೂಕ್ತಕ್ರಮ ತೆಗೆದುಕೊಡಿಲ್ಲವೆಂದು ಹೇಳಿದರೆ ಹೇಗೆ ? ಐರನ್ ಅಂಡ್ ಸ್ಟೀಲ್ ವರ್ಕ್ಸ್ ವಿಷಯ ಬಹಳ ಮುಖ್ಯವಾದ ವಿಷಯವೆಂದು ಹೇಳಿದ್ದರೂ indirectly

(Sri M. C. NARASIMHAN)

they have suggested that the profit figures given by the Government are fictitions. One *sine guo non* of a minister is self-rightconsness. ಇದರಿಂದ ಅಲ್ಲಿ ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲವೆಂಬುದು ಗೊತ್ತಾಗುತ್ತದೆ. ಯಾರೇ ಆಗಲಿ ಮಂತ್ರಿಗಳಾಗಬೇಕಾದರೆ ಸಾಕಷ್ಟು ಅರ್ಹತೆ ಇರಬೇಕು. ಈ ಐದು ವರ್ಷಗಳ ಅವಧಿಯಲ್ಲಿ ಇವರು ಏನೇನು ಮಾಡಿದ್ದಾರೆಂಬುದನ್ನು I do not want to multiply details. ಬಾಕಿ ಇನ್ನೇನು ಇಲ್ಲದೇ ಇದ್ದರೂ ಇಂತಹ ಸಣ್ಣ ವಿಷಯಗಳನ್ನು ಕಾರ್ಯಗತ ಮಾಡತಕ್ಕ ಶಕ್ತಿ ಇವರಿಗೆ ಇಲ್ಲದಿದ್ದರೆ ಇವರು ನಿಜವಾಗಿ ಮಂತ್ರಿಗಳಾಗುವುದಕ್ಕೆ ಲಾಯಕ್ಕಾಗಿಲ್ಲವೆಂಬುದನ್ನು ಲಾ ಮಿನಿಸ್ಟರ್ ಮತ್ತು ಫೈನಾನ್ಸ್ ಮಿನಿಸ್ಟರ್ ತಿಳಿದುಕೊಳ್ಳಬೇಕು.

ಇನ್ನು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನಲ್ಲಿ ಹೇಳತಕ್ಕ ಪ್ರತಿಯೊಂದು ಅಂಶವನ್ನು ನೋಡಿದರೆ ಅಲ್ಲಿನ ಎಲಿಮೆಂಟರಿ ಅಥವಾ ಸಣ್ಣ ವಿಷಯಗಳು lay-men ಸಹ ಕೈಗೊಳ್ಳುವಂಥಾದ್ದು ಆಗಿದೆ. ಇನ್ನು ಪಬ್ಲಿಕ್-ಅಕೌಂಟ್ಸ್ ಕಮಿಟಿಯಲ್ಲಿ ಇಂಡಸ್ಟ್ರೀಸ್ ಬಗ್ಗೆ ಅನುಭವವಾಗಿರುವವರು ಒಬ್ಬ ಸದಸ್ಯನೂ ಇಲ್ಲ. ಶ್ರೀಮಾನ್ ಜತ್ತಿ ಮತ್ತು ಶ್ರೀಮಾನ್ ನಿಜಲಿಂಗಪ್ಪನವರೂ ಇಬ್ಬರೂ ಫಾಲೋಯರ್ಸ್ ಇದ್ದರೂ ಸಹ ಇಂತಹ ಸಣ್ಣ ವಿಷಯಗಳಲ್ಲಿ ಯಾವರೀತಿ ಯಾದ ಕಾಂಪ್ಲಿಕೇಷನ್ ಇರಲಾರದು ಎಂದು ನಾನು ತಿಳಿದಿದ್ದೇನೆ. ಒಂದಕ್ಷರವೂ ಸಹ ತಪ್ಪಾಗಲಾರದು. ಅಂಥಾದ್ದರಲ್ಲಿ ಈಗ ಆಡಳಿತದಲ್ಲಿ ದಕ್ಷಹೀನತೆ ತೋರಿಸುತ್ತಿದ್ದೀರಿ ಎಂದು ಹೇಳಿದರೆ ಏನು ತಪ್ಪಾಗಲಾರದು.

ಇನ್ನು laws of various activities ಬಗ್ಗೆ ಅನೇಕ ವಿಚಾರಗಳನ್ನು ಸರ್ಕಾರ ಗಮನಿಸಬೇಕಾಗಿದೆ. ಈ ಕಮಿಟಿಯ ವರದಿಯಲ್ಲಿ ಪ್ಯಾರಾ 31 ರಲ್ಲಿ ಹೇಳಿರುವ ಹಾಗೆ ಡಿಫಾಲ್ಕೇಷನ್ ಬಗ್ಗೆ ಹಿಂದೆ ಒಂದು ಸಾರಿ ಶ್ರೀಮಾನ್ ಮರಿಯಪ್ಪನವರು ಇಂಡಿವಿಜುಯಲ್ ರೆಸ್ಪಾನ್ಸಿಬಿಲಿಟಿ ಫಿಕ್ಸ್ ಮಾಡಬೇಕು ಎಂಬುದಾಗಿ ಈ ಸಭೆಯಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದರು. ಅಂದಮೇಲೆ ಈಗ ಶ್ರೀಮಾನ್ ಮರಿಯಪ್ಪನವರನ್ನು ನಂಬಬೇಕೋ ಅಥವಾ ಕಮಿಟಿಯವರನ್ನು ನಂಬಬೇಕೋ ? The Committee were disappointed to learn that the question of fixation of responsibility had not been looked into even though three years have elapsed. ಈ ತರಹ generalization ಅಥವ comprehensive views ಇವರಿಗೆ ಇದ್ದರೆ ನಿಜವಾಗಿ ರಾಜೀನಾಮೆ ಕೊಡುವುದೇ ಉತ್ತಮವೆಂದು ನಾನು ಹೇಳುತ್ತೇನೆ. ಮುಖ್ಯವಾಗಿ ಎರಡು ಮೂರು ವಿಷಯಗಳನ್ನು ಹೇಳುತ್ತೇನೆ. ಇನ್ನು ಬೆಟರ್‌ಮೆಂಟ್ ವಿಷಯದಲ್ಲಿ ಕಮಿಟಿಯವರು ಹೇಳಿರುವುದು ಸಾಲದು ಎಂದು ನಾನು ಹೇಳುತ್ತೇನೆ. ಇನ್ನು ಸಬಾರ್ಡಿನೇಟ್ ಲೆಜಿಸ್ಲೇಷನ್ ಬಗ್ಗೆ ಕೆಲವು ರೂಲ್ಸನ್ನು ಪರಿಶೀಲನೆ ಮಾಡಿದ್ದಾರೆ. ಅದೂಕೂಡ ಅಷ್ಟೇ.

Sri S. D. KOTHAWALE.—I think the Hon'ble Member cannot refer to that.

Sri M. C. NARASIMHAN.—All right. I do not refer to it. I will raise my own objections.

ಇನ್ನು 1960ನೇ ಇಸವಿ ಸೆಪ್ಟೆಂಬರ್ 10ನೇ ತಾರೀಖಿನಿಂದ ಈ ಬೆಟರ್‌ಮೆಂಟ್ ಲೆವಿ ಆಕ್ಟನ್ನು ಜಾರಿಗೆ ಕೊಡಬೇಕೆಂದು ಒಂದು ಗಾವರ್ನಮೆಂಟ್ ನೋಟಿಫಿಕೇಷನ್ನನ್ನು ಕೊಟ್ಟರು. ಅದು 1967ರಲ್ಲಿಯೇ ಪಾಸ್ ಆಯಿತು. ಆದರೆ ಆಗ ಅಮೆಂಡ್‌ಮೆಂಟ್ ಆದುದನ್ನೇ ಮರೆತು ಬಿಟ್ಟಿದ್ದಾರೆ. 1957ರಲ್ಲಿಯೇ ಏತಕ್ಕೆ ಜಾರಿಗೆ ಕೊಟ್ಟಿಲ್ಲ.

Sri T. MARIAPPA.—There was a technical law.

ಶ್ರೀ ಎಂ. ಸಿ. ನರಸಿಂಹನ್.—ಅದರಲ್ಲಿಯೂ ಎಷ್ಟೆಷ್ಟೋ ಕೆಲಸ ಹಿಂದಿದೆ ಎಂಬುದನ್ನು ಹೇಳುತ್ತೇನೆ.

1960 ರಲ್ಲಿ ಕೊಡಬೇಕಾಗಿತ್ತು. ಹಾಗೆ ಲಾ ಡಿಪಾರ್ಟಮೆಂಟಿನವರು Defect ಇತ್ತು ಎಂದು ಹೇಳಿದ್ದರೆ ಅದನ್ನು ಸರಿಪಡಿಸಿ ಖಂಡಿತ ಇದನ್ನು ಜಾರಿಗೆ ಕೊಡಬಹುದಾಗಿತ್ತು. ಆದರೆ ಅಮೆಂಡಿಂಗ್ ಬಿಲ್ 16ನೇ ಸೆಪ್ಟೆಂಬರ್ 1960 ರಲ್ಲಿ ಬಂತು. ಆದರೆ ಎರಡು ಸೆಷನ್ನಾದರೂ ಅದನ್ನು ಚರ್ಚೆ ಮಾಡಿ ಪಾಸು ಮಾಡಲು ತೆಗೆದುಕೊಳ್ಳಲಿಲ್ಲ.

ಶ್ರೀ ಟಿ. ಮರಿಯಪ್ಪ.—ಟೈಮ್ ಇರಲಿಲ್ಲ.

ಶ್ರೀ ಎಂ. ಸಿ. ನರಸಿಂಹನ್.—ಮೊದಲು ಬಡ್ಜೆಟ್ಟು ಸೆಷನ್ನು ಆದಾಗ ಈ ಬಿಲ್ಲನ್ನು ಇಂಟ್ರೊಡ್ಯೂಸು ಮಾಡಿದಾಗ ಇದನ್ನು ಚರ್ಚೆ ಮಾಡಲಿಲ್ಲ. ಇದಾದ ನಂತರ ರೂಲ್ಸುಗಳನ್ನು ಡ್ರಾಫ್ಟ್ ರೂಲ್ಸು ಎಂದು 10ನೇ ಅಕ್ಟೋಬರ್ 1960ರಲ್ಲಿ ಮೊದಲು ಪ್ರಕಟಪಡಿಸಿದರು. ಇದಾಗಿ 8 ತಿಂಗಳುಗಳ ನಂತರ ಎಂದರೆ 15ನೇ ಮಾರ್ಚಿ 1961ರಲ್ಲಿ ಏನೂ ಆಬಜಕ್ಷನ್ನುಗಳು ಬರದೇ ಇದ್ದರೂ ಫೈನಲ್ ಡ್ರಾಫ್ಟ್ ರೂಲ್ಸು ಎಂದು ಹೇಳಿ ಅದನ್ನೇಕೆ ಪಬ್ಲಿಷ್ ಮಾಡಿದರು? That is illegal. Government had no authority to issue such a Rule. ಇದನ್ನು ಏಕೆ ಹೀಗೆ ಮಾಡಿದ್ದಾರೆಂದ ಲಾ ಡಿಪಾರ್ಟಮೆಂಟಿನವರನ್ನು ಕೇಳಿದರೆ ಪಿ. ಡಬ್ಲ್ಯೂ.ಡಿ. ಇಲಾಖೆಗೆ ಸೇರಿದ್ದು ಎಂದು ಹೇಳುತ್ತಾರೆ, ಪಿ. ಡಬ್ಲ್ಯೂ.ಡಿ. ಇಲಾಖೆಯವರನ್ನು ಕೇಳಿದರೆ ಇವೆಲ್ಲವನ್ನೂ ಲಾ ಡಿಪಾರ್ಟಮೆಂಟಿನವರೇ ಡ್ರಾಫ್ಟ್ ಮಾಡಿ ಕಳುಹಿಸುತ್ತಾರೆ ಎಂದು ಹೇಳುತ್ತಾರೆ. ಹೀಗಾಗಿ ಈ ಇರಿಗೇಷನ್ನು ಬೆಟರುಮೆಂಟು ಲೆವಿ ಅಕ್ಟನ್ನು ಜಾರಿಗೆತಂದು ಕೊಡುವುದಕ್ಕೆ ಆಗಲಿಲ್ಲ. ಹೀಗೆ ಈ ಬಿಲ್ಲನ್ನು ಜಾರಿಗೆ ತರುವುದಕ್ಕೆ ಆಗಲಿಲ್ಲ ಎನ್ನುವುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ಅಲ್ಲಿನ ಪಿ. ಡಬ್ಲ್ಯೂ. ಡಿ. ಸೆಕ್ರೆಟರಿಗಳು ತರಲಿಲ್ಲವೋ ಏನೋ ಎಂದು ಕಾಣುತ್ತದೆ. ಈಗ ಅಮೆಂಡಿಂಗು ಆಕ್ಟು ಪಾಸಾಗಿದ್ದರೂ ಕೂಡ ಇನ್ನು ಒಂದು ವರ್ಷವಾದರೂ ಕೂಡ ಇದನ್ನು ಜಾರಿಗೆ ತರವುದಕ್ಕೆ ಆಗುವುದಿಲ್ಲ. ಇದರಿಂದ ಸರಕಾರಕ್ಕೆ ಎಷ್ಟು ಹಣ ಲುಕ್ಸಾನು ಆಗಿದೆ ಎನ್ನುವುದನ್ನಾದರೂ ನೋಡಿಕೊಂಡು ಈ ಮಿನಿಸ್ಟ್ರಿಯವರು ರಾಜಿನಾಮೆ ಕೊಡಬೇಡವೇ?

ಇನ್ನು (Debt) ಪೊಸಿಷನ್ನು ವಿಚಾರದಲ್ಲಿ ಈ ಸಭೆಯಲ್ಲಿ ನಾನು ಮತ್ತು ನಮ್ಮ ಇತರ ಸದಸ್ಯರುಗಳು ತಮ್ಮ ಗಮನಕ್ಕೆ ತರುತ್ತಿದ್ದೇವೆ. ಅಲ್ಲದೆ ಶ್ರೀಮಾನ್ ಮಲ್ಲಾರಾಧ್ಯರವರೂ ಕೂಡ ಪದೇ ಪದೇ ಹೇಳುತ್ತಲೇ ಬರುತ್ತಿದ್ದಾರೆ. ಇನ್ನು ಮೇಲೆ ನಮ್ಮ ಹಣ ಕಾಸಿನ ಸಚಿವರು ಸ್ಟೇಟುಮೆಂಟನ್ನು ಪ್ರಿಂಟು ಮಾಡಿ ಬೇಕಾದರೂ ಇಟ್ಟುಕೊಂಡು ಮುಂದೆ ಬರುವ ಹಣ ಕಾಸಿನ ಸಚಿವರೂ ಕೂಡ ಇದನ್ನು ಹೇಳುವಂತೆ ಮಾಡಬಹುದು. ಅವರು ಯಾವಾಗಲೂ

> "The financil position of the State is not alarming but is causing anxiety."

ಎಂದು ಪ್ರತಿಸಲವೂ ಹೇಳುತ್ತಿರುವುದನ್ನು ಈ ಸಾರಿ ಪಬ್ಲಿಕ್ ಅಕೌಂಟು ಸಮಿತಿಯವರು ಅವರ ವರದಿಯಲ್ಲಿ ಬಹಳ ಚೆನ್ನಾಗಿ ತೋರಿಸಿದ್ದಾರೆ. ಸರಕಾರದ ನೇತೃತ್ವದಲ್ಲಿ ನಡೆಯುತ್ತಿರುವ ಎಲ್ಲಾ ಫ್ಯಾಕ್ಟರಿಗಳವರೂ ಕೂಡ ಬ್ಯಾಲೆನ್ಸ್ ಷೀಟನ್ನು ಕೊಡಬೇಕೆಂದು ಹೇಳುತ್ತಿದ್ದರೂ ಇನ್ನು ಕೊಡುತ್ತಿಲ್ಲ. ಈ ವರದಿಯ ಪ್ರಕಾರ ನೋಡಿದರೆ 54—55ರಿಂದಲೂ ಕೊಟ್ಟಿಲ್ಲ ಮತ್ತು ಪ್ರಾಫಿಟ್ಟು ಮತ್ತು ಲಾಸ್ ಅಕೌಂಟನ್ನೂ ಕೂಡ ಕೊಟ್ಟಿಲ್ಲ. ಪುಟ 25 ರಲ್ಲಿ

> "The Committee were distressed to note that out of the 12 concerns which were stated to be in default, by the Accountant General, the *pro forma* accounts were arrears from 1956-57 onwards in the case of 4 concerns, while 4 more concerns were in arrears in respect of the accounts for 1957-58 and 1958-59........."

ಎಂದು ಹೇಳಿದ್ದಾರೆ.

(ಶ್ರೀ ಎಂ. ಸಿ. ನರಸಿಂಹನ್)

ಇನ್ನು ಈ ಕಮಿಟಿಯವರು ಕೆಲವು ಅಡ್ಮಿನಿಸ್ಟ್ರೇಟಿವ್ ಸಲಹೆಗಳನ್ನು, ಕೆಲವು ಪಾಲಸಿಗಳ ವಿಷಯದಲ್ಲಿಯೂ ಸರಕಾರಕ್ಕೆ ಸಲಹೆಗಳನ್ನು ಕೊಟ್ಟಿದ್ದಾರೆ. ಇದನ್ನು ಸರಕಾರದವರುಗಮನಿಸಬೇಕು ಎಂದು ಹೇಳಿದ್ದಾರೆ. ಈ ಸಮಯದಲ್ಲಿ ಮಾನ್ಯ ಸಚಿವರು ಉತ್ತರ ಕೊಡುವಾಗ ಫರ್ಟಿಲೈಸರು ಡಿಸ್ಟ್ರಿಬ್ಯೂಷನ್ನಿನ ವಿಚಾರದಲ್ಲಿ ಹೇಳಬೇಕೆಂದು ಕೋರುತ್ತೇನೆ. ಪುಟ 31ರಲ್ಲಿ ಹೇಳಿರುವಂತೆ:

> "It is not clear to the Committee as to what exactly are the advantages to Government and the public in this transfer......"

ಇದನ್ನು ಸೊಸೈಟಿಗಳಿಗೆ ಕೊಡುವುದಕ್ಕೆ ನೇರವಾಗಿ ಕೊಡುವವರಿಗಿಂತ ಇನ್ನೂ ಹೆಚ್ಚಿಗೆ ಟನ್ನಿಗೆ ಹತ್ತು ರೂಪಾಯಿನಂತೆ ಕೊಡುತ್ತಿದ್ದಾರೆ ಎಂದು ಹೇಳಿದ್ದಾರೆ. ಅಲ್ಲದೆ ಇದರಲ್ಲಿ:

> "It is obvious that by allowing this margin of Rs. 10 per ton, Government have indirectly contributed to the increase in the cost of foodgrains which is highly undesirable"

ಯಾವಯಾವುದು ಮುಖ್ಯವಾದುದು, ಯಾವುದು ಅತಿ ಮುಖ್ಯವಾದುದು ಎನ್ನುವುದನ್ನೆಲ್ಲಾ ಹೇಳಿ ಅದಕ್ಕೆ ಸಾಕಷ್ಟು ಗಮನವನ್ನು ಕೊಡುತ್ತಿಲ್ಲ ಎನ್ನುವುದು ಈ ಪಬ್ಲಿಕ್ ಅಕೌಂಟು ಕಮಿಟಿ ರಿಪೋರ್ಟಿನಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಹೀಗೆ ಒಂದು ಪಾಲಸಿ ವಿಷಯದಲ್ಲಿ, ಅಡ್ಮಿನಿಸ್ಟ್ರೇಷನ್ನಿನ ವಿಷಯದಲ್ಲಿ ಸ್ವಲ್ಪ ಸರಕಾರದವರು ನೋಡಿ ಪ್ರತಿ ಐಟಂನಲ್ಲಿಯೂ ಸರಿಯಾದ ರಿಪ್ಲೈನ್ನು ಕೊಟ್ಟಿಲ್ಲ. ನಾನೂ ಪ್ರತಿಯೊಂದನ್ನು ಇಲ್ಲಿ ಹೇಳಲು ಈಗ ಕಾಲಾವಕಾಶವಿಲ್ಲ.

ಕಮ್ಯೂನಿಕೇಷನ್ನು ಡೆವಲಪ್‌ಮೆಂಟು ಶಾಖೆಯಲ್ಲಿ ಎಷ್ಟು ಅನ್ಯಾಯವಾಗಿದೆ ಎಂದರೆ 279 ಕೆಲಸಗಳಿಗೆ ದುಡ್ಡನ್ನು ಕೊಟಿದ್ದರೂ ಕೆಲಸಗಳನ್ನೇ ಮಾಡಿಲ್ಲ. ಇದರಲ್ಲಿ—

Page 29.

> "(i) In respect of 104C works, first instalment of grant to the extent of Rs. 7,06,475 had been paid but the work had not commenced even on 31st March 1958.
>
> (ii) In respect of 279 works, both the instalments of grants amounting to Rs. 6,83,122 had been paid but the work had not commenced till 31st March 1958.
>
> (iii) In respect of 1709 works, an outlay of Rs. 24,11,809 had actually been incurred but the works remained incomplete on 31st March 1958."

ಈ ತರನಾಗಿ ಸರಕಾರ ಕೆಲಸ ನಡೆಸುತ್ತಿದ್ದರೆ ಏನು ಗತಿ ಸ್ವಾಮಿ? ಸಣ್ಣಪುಟ್ಟ ಅಧಿಕಾರಿಗಳು ತಪ್ಪು ಮಾಡಿದ್ದಾರೆಂದು ಅವರ ಮೇಲೆ ಡಿಸಿಪ್ಲಿನರಿ ಆಕ್ಷನ್ನನ್ನು ತೆಗೆದುಕೊಳ್ಳುತ್ತೀರಿ. ಹೀಗೆ ಕನ್ನಡದಲ್ಲಿ ಹೇಳುವ ಗಾದೆಯಂತೆ ಬೇಲಿಯೇ ಹೊಲ ಮೇದಂತೆ ಆದರೆ ಯಾರನ್ನು ಕೇಳುವುದಕ್ಕಾಗುತ್ತದೆ? ಇದಕಿಂತ ಸೀರಿಯಸ್ ಆದ ವಿಷಯ ಬೇರೊಂದಿಲ್ಲ. ನಮ್ಮ ಸರಕಾರಕ್ಕೆ ಇದು ಹೆಚ್ಚಾಗಿ ಅನ್ವಯಿಸುವುದು ಹೆಚ್ಚಾಗಿ ಸ್ಟೇಟುರೀ ಆರ್ಗನೈಸೇಷನ್ನು ಆದಾಗ ಹೇಳಲಾಗಿತ್ತು. ಗೋರವಾಲ ಸಮಿತಿಯವರು ವರದಿಯಲ್ಲಿ ಹೇಳಲಾಗಿತ್ತು. ಮತ್ತು ವಿರೋಧ ಪಕ್ಷದ ಸದಸ್ಯರೂ ಕೂಡ ಸರಕಾರದಲ್ಲಿ ಇರುತ್ತು ದಕ್ಷತೆ ಕಡಿಮೆಯಾಗಿವೆ, ಶಿಸ್ತು ಎಂದು ಹೇಳುತ್ತಲೆ ಬಂದಿದ್ದಾರೆ. ಅದರಂತೆ ಇದರಲ್ಲೇ ಎಷ್ಟೋ ನಿದರ್ಶನಗಳನ್ನು ಕೋರಿಸ ಬಹುದು. ಎಲ್ಲ ಹಂತದಲ್ಲಿಯೂ, ಆಡಳಿತವ ಪ್ಯಾರಾಸೈಟು ಡಿಸೀಸ್ ಎನ್ನುವಂತೆ ಬರುತ್ತಿದೆ. ಪರಿಸ್ಥಿತಿ ಎಷ್ಟು ಗಂಭೀರವಾಗಿದೆ, ಈ ಪಬ್ಲಿಕ್ ಅಕೌಂಟು ಸಮಿತಿಯವರೆ ಸಿಫಾರಸುಗಳನ್ನು ಕಳುಹಿಸಿದ್ದಾರೆಂದು ಸುಮ್ಮನೆ ಲಘುವಾಗಿ ಕಾಣುವಂತೆ ಉತ್ತರ ಹೇಳಿದರೆ ಇಲ್ಲ ಸರಿಹೋಗು

ಈ ವರದಿಯಲ್ಲಿ ಲೆಜಿಸ್ಲೇಚರಿನ ಇಂಡಿಪೆಡೆನ್ಸ್ ವಿಚಾರದಲ್ಲಿ ನಮ್ಮ ಲಾ ಮಿನಿಸ್ಟರು ಹೇಳಿದಂತೆ ಲಾ ಡಿಪಾರ್ಟುಮೆಂಟಿನವರು ಅಂಬ್ಜಕ್ಷನ್ ತೆಗೆದುಕೊಂಡರು ಎಂದು ಇಲ್ಲಿ ಬಂದಿದೆ. ಕಾನ್ಸ್ಟಿಟ್ಯೂಷನ್ನಿನ ಪ್ರಕಾರ ಲೆಜಿಸ್ಲೇಚರ್ ಸೆಕ್ರೇಟೇರಿಯಟ್ಟು ಇಂಡಿಪೆಂಡೆಂಟಾಗಿ ಇರಬೇಕಾದುದು ಅಗತ್ಯ. ಇದರ ವಿಚಾರದಲ್ಲಿ ಮಾತ್ರ ಒಂದು ವಿಷಯವನ್ನು ಇಲ್ಲಿ ಹೇಳಬೇಕೆಂದು ಆಸೆ ಪಡುತ್ತೇನೆ. 1959ನೇ ಡಿಸೆಂಬರ್ ತಿಂಗಳಿನಲ್ಲಿ 129 ನೇ ಪ್ರಶ್ನೆ ಲೆಜಿಸ್ಲೇಚರಿನ ಓವರು ಟೈಮ್ ಅಲೋಯನ್ಸ್‌ಗಳ ವಿಚಾರದಲ್ಲಿ ಅರ್ಧ ಘಂಟೆಯ ಚರ್ಚೆಯನ್ನು ಅಲ್ಲಿ ತಂದಿದ್ದೆ. ಇಂಡಿಪೆಂಡೆಂನ್ಸಿ ಆಫ್ ದಿ ಸೆಕ್ರೆಟೇರಿಯಟ್ಟು ಎನ್ನುವ ವಿಚಾರದಲ್ಲಿ ಈ ಸಭೆಯಲ್ಲಿಯೂ ಮತ್ತು ಮೇಲಿನ ಮನೆಯಲ್ಲಿಯೂ ಎರಡು ಮೂರು ಬಾರಿ ಚರ್ಚೆಗೆ ಬಂದು ಈ ಓವರ್ ಟೈಂ ಅಲೋಯನ್ಸು ಕೊಡಬೇಕೆಂದು 1957—58 ರಲ್ಲಿ ರೆಕಮೆಂಡೇಷನ್ನು ಕೊಟ್ಟಿದ್ದರೂ 1960ನೇ ಇಸವಿಯವರೆಗೂ ಜಾರಿಗೆ ಬರಲಿಲ್ಲ. ಇಷ್ಟು ನಿಧಾನವಾಗಿದೆ ಎನ್ನುವುದು ಗಮನಾರ್ಹವಾದ ವಿಷಯ. ಲೆಜಿಸ್ಲೇಚರಿನ ಸೆಕ್ರೆಟೇರಿಯಟ್ಟಿನ ಓವರು ಟೈಮ್ ಬೇರೆ ಸರಕಾರದ ಬೇರೆ ಇಲಾಖೆಗಳಲ್ಲಿ ಮಾಡುವವರು ಓವರು ಟೈಮ್ ಬೇರೆ ಎನ್ನುವುದರ ಬಗ್ಗೆ ಒಂದು ಕಮಿಟಿಯನ್ನು ಅಪಾಯಿಂಟು ಮಾಡಿದ್ದರು. ಇದು ಹೇಗೆ ನ್ಯಾಯ ಎನ್ನುವುದನ್ನು ಲಾಯರಾಗಿರುವ ಮಾನ್ಯ ಮಂತ್ರಿಗಳೇ ಹೇಳಬೇಕು.

4–00 P.M.

Legislature Sceretariat ವಿಚಾರದಲ್ಲಿ independence of legislature Secretariat is maintained ಎಂದು ಹೇಳುವದಾದರೆ ಅದು ಹೇಗೆ ? ಇನ್ನೊಂದು ಸ್ವಾಮಿ, Deputy Finance Minister ಅವರು ಉತ್ತರ ಕೊಡುತ್ತಾ ಹೀಗೆ ಹೇಳಿದ್ದಾರೆ:

> "If a member of Government to whatever department he belongs is called upon to give extra energy and is called upon to service for longer hours than he does normally then naturally Government should compensate him"

ಅವರು ಈ ತತ್ವವನ್ನು ಒಪ್ಪಿಕೊಂಡಿದ್ದಾರೆ. ಕಮೀಟಿಯವರು legislature Secretariatಗೆ over time allowance ಕೊಡಬೇಕೆಂದು ಹೇಳಿದ್ದರು, ಅದನ್ನು ಕೊಟ್ಟಿಲ್ಲ. ಇದೊಂದು ಸಣ್ಣ ವಿಷಯ. ಅಂಥ ಖರ್ಚು ಏನೂ ಇಲ್ಲ. ಆದರೂ ಸಹ discrimination ಮಾಡಲಾಗುತ್ತದೆ. ಮುಖ್ಯವಾಗಿ legislature Secretariat ಬಗ್ಗೆ ಅಧ್ಯಕ್ಷರು ಹೇಳುವುದಕ್ಕೆ ಗಮನ ಕೊಡಬೇಕಾಗುತ್ತದೆ. ಅದಕ್ಕೆ ಅಲಕ್ಷ್ಯ ಮನೋಭಾವನೆ ತೋರಿಸಿದರೆ ಅದು ಹೇಗೆ independent ಆಗುತ್ತದೆ! ಅದಕ್ಕೆ ಏನು ಬೆಲೆ ಇದೆ? ಸಣ್ಣ ಪುಟ್ಟ ವಿಷಯದಲ್ಲಿ ಕೂಡ ಬೆಲೆ ಕೊಡುವುದಿಲ್ಲ. ಆದ್ದರಿಂದ ಅದು ಬೇರೆ ಎಂದು ಹೇಳುವುದು ಹೇಗೆ ಸಾಧ್ಯ?

If we go on analysing these things generally, Government will be put in an embarrassing situation ಶ್ರೀ ಷಂಸುದ್ದೀನ್ ಅವರು ಉತ್ತರ ಹೇಳಿದ್ದನ್ನು ನೋಡಿದರೆ independence of the ligislature is a political consideration ಎನ್ನುವ ಹಾಗೆ ಇದೆ ಎಂದು ಅನ್ನಿಸುತ್ತದೆ. ಸರಕಾರದ ನೀತಿ ಹೀಗೆ ಇರುವುದರಿಂದ ಈ ರೀತಿ ಹೇಳಬೇಕಾಗುತ್ತದೆ. ಕೇಂದ್ರ ಸರಕಾರವು ಲೋಕಸಭೆಗೆ ಬೆಲೆ ಕೊಡುವ ಹಾಗೆ ಇಲ್ಲಿಯೂ ರಾಜ್ಯ ಸರಕಾರ lagislature Secretariat ಗೆ ಬೆಲೆ ಕೊಡಬೇಕು. ಆ ನೀತಿ ಅನುಸರಿಸಬೇಕು, ಹಾಗೆ ಮಾಡಲು ಮನಸ್ಸು ಇಲ್ಲ ಎಂದು ಕಾಣುತ್ತದೆ. Over time allowance ಕೊಡತಕ್ಕ ಸಣ್ಣ ವಿಷಯದಲ್ಲಿ ಕೂಡ ಅಧಿಕಾರ ಚಲಾಯಿಸಲು ಆಗದೇ ಇದ್ದ ಮೂಲಕ ಆ ಹಣವನ್ನು ಉಪಯೋಗಿಸುವದಕ್ಕಾಗಲಿಲ್ಲವೆಂದು ವಾಪಸ್ ಮಾಡಲಾಯಿತು. ಇದೊಂದು ನಿದರ್ಶನ ಸಾಕು ಅಲ್ಲವೇ ?

Sri J. B. MALLARADHYA.—If a car is to be hired, they must take the permission of the Law Department, would the Hon'ble Ministr deny it ?

ಶ್ರೀ ಎಂ. ಸಿ. ನರಸಿಂಹನ್.—ಇದು ಬಹಳ ಶೋಚನೀಯವಾದದ್ದು. ಸಭಾಧ್ಯಕ್ಷರು ಹೇಳಿದ್ದನ್ನು ಸರಕಾರ ಕೇಳುವದಿಲ್ಲ. ವಿರೋಧ ಪಕ್ಷದವರು ಹೇಳಿದ್ದನ್ನು ಕೇಳುವದಿಲ್ಲ. ಹಾಗಾದರೆ ಯಾರು ಹೇಳಿದ್ದನ್ನು ಕೇಳುತ್ತಾರೆ? ಇದು ತೀರಾ ಅನ್ಯಾಯವಾದದ್ದು. ಇದನ್ನು ಕಟುವಾಗಿ ಟೀಕಿಸಬೇಕಾಗುತ್ತದೆ. Irresponsible Government provokes irresponsible opposition ಎಂದು ಭುಲಾಭಾಯಿ ದೇಸಾಯಿಯವರು ಹೇಳಿದ್ದಾರೆ.

Sri J. B. MALLARADHYA.—I do not agree Sir.

Sri M. C. NARASIMHAN.—With due respect to Mr. Mallaradhya, After all we are led by him we cannot go beyond the frame works ನಾವು ಒಂದು ಮಾತು ಹೇಳಬೇಕಾಗುತ್ತದೆ. Government has been irresponsible at every stage. ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್ ಆಗಲಿ, ಎಸ್ಟಿಮೇಟ್ಸ್ ಕಮಿಟಿ ರಿಪೋರ್ಟ್ ಆಗಲಿ, ಯಾವುದೇ ಬಿಲ್ ಆಗಲೀ, ವಿರೋಧ ಪಕ್ಷದವರು ಕಟುವಾಗಿ ಟೀಕಿಸಿದರೂ ಸಹ ಅದಕ್ಕೆ ಬೆಲೆಯಿಲ್ಲ. ಬೆಲೆಯಿಲ್ಲದ ಟೀಕೆ ಏಕೆ ಮಾಡಬೇಕು?

ಶ್ರೀ ಟಿ. ಮರಿಯಪ್ಪ.—ನಿಮ್ಮ ಟೀಕೆಗೆ ಬೆಲೆಯಿಲ್ಲ ಎಂದು ಯಾರು ಹೇಳಿದರು? ಅದಕ್ಕೆ ತುಂಬಾ ಬೆಲೆ ಕೊಡುತ್ತೇವೆ.

ಶ್ರೀ ಎಂ. ಸಿ. ನರಸಿಂಹನ್.—ಅದು ಅಕ್ಷರಶಃ ಹೇಳತಕ್ಕಂಥಾದ್ದು ನಿಜವಾಗಿಯೂ ವಿರೋಧ ಪಕ್ಷದ ಸದಸ್ಯರು ಒಳ್ಳೆಯ ಸಲಹೆಗಳನ್ನು ಮಾಡುತ್ತಾರೆ. ಎಲ್ಲವನ್ನೂ ವಿರೋಧ ಮಾಡುವದಿಲ್ಲ. ಪ್ರಯೋಜನವಾಗುವಂಥ ಒಳ್ಳೆಯದು ಏನಾದರೂ ಇದ್ದರೆ ಅದನ್ನು Support ಮಾಡುತ್ತೇವೆ ಅನೇಕ ತಕರಾರುಗಳನ್ನು ಸರಕಾರದ ಗಮನಕ್ಕೆ ತರಬೇಕಾಗುತ್ತದೆ. ಪ್ರಜಾಪ್ರಭುತ್ವ ರಾಜ್ಯ ಪದ್ಧತಿಯಲ್ಲಿ ಜವಾಬ್ದಾರಿಯಿಂದ ಪ್ರತಿನಿಧಿಗಳು ಹೇಳುವುದಕ್ಕೆ ಬೆಲೆ ಕೊಡಬೇಕಾಗುತ್ತದೆ. ಇದನ್ನು ಅಕ್ಷರಶಃ ಪಾಲಿಸಬೇಕೆಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

†Sri B. SHAMSUNDER (Bhalki).—Sir, the Public Accounts Committee has thrown a flood of light on the administration of the State. Before speaking on the Report, I will tell you a story which would be revealing. Three or four days ago I read a phrase: "get out or may get out". Once a Chief Minister visited a lunatic assylum to see how it is working. A man who was supposed to have been cured of his madness was seen by the C. M. and he asked him: "How do you do". The ex-lunatic replied: "Quite, well, thank you and who are you". The Chief Minister then revealed his identity and with a surprised look that man replied "Oh! When I came here I called myself a Prime Minister and it took one year for me to be cured. Now you call yourself only a Chief Minister and you will be cured within 6 months."

Now we have seen Congress Members speaking on various matters in this House. It is no use of hiding the obvious. At one breath they say that the administration has deteriorated and at another breath they say they would support the Government.

Only one sentence from this Report suffices to convince the entire House and the people how we are lead by the Note here. On Page 7, para 13, the Report says:

> "During discussion the Accountant General pointed out that at his instance a few meetings were convened at the Secretariat level *i.e.* with the Secretaries, Heads of Departments

concerned and his officers, for ensuring speedier settlement of the outstanding objections."

In democracy, suggestions are not so very important unless objections are made and they are remedied.

"The Committee were, however, distressed to learn that generally they were not taken seriously by the Departments and on a few occasions, the proposed meetings had even to be called off as the Departmental Officers did not turn up."

This is the affair of the country of the administration of our State. There is no use of saying that the language is hard, is strong. I congratulate the Members of the Committee who have brought out this Report. They have scrutinised all the Departments, all the secretaries were examined; the records were examined. After going through all these things, they have brought out this Report.

About transfers my friend Mr. Narasimhan said much. But one or two things I will bring to notice about transfers. I would invite the attention of the House to para 12 on Page 7. I will quote one instance, I had brought to the notice of the House that within three months in a certain department, that is, in the Excise Department, 17 transfers were effected and the officials were there only for three or four months. Why it had taken place nobody replied at that time. The Minister in charge said something and the Government kept quiet.

About the Iron and Steel Works, the Committee has stated on **Page 36.**

"Cast Iron on Spun Pipe Plant.

This plant was erected in November 1957. During the four years of operation the plant has not become self supporting although Government anticipated that it would work on commercial basis and make profits......"

On the 20th November, I wrote to the Chief Minister. I had been to Bhadravathi. Some people gave me representations and supplied me with some material. I was told that the Central Government and the Controller of Iron and Steel at Calcutta wanted to know from our Government how much quota we required for Iron and steel and who were your stockists because they were going to release it. I was told that up till now steps have been taken to get those quotas. That is the State of affairs everywhere in the State. Since two or three weeks I am staying in the Legislators' Home here. There every Member who belies in non-violence goes on abusing other members. I have been watching them. I am watching the something in the Ministry itself.

Sri T. MARIAPPA.—What is the bearing on the Report of the Public Accounts Committee?

Sri B. SHAMSUNDAR.—I am driving at a certain point. I want to bring to their notice how they have been plying with us.

Sri B. D. JATTI.—May I know what year's quota he is referring?

Sri B. SHAMSUNDAR.—I do not know details; but I was informed. Have you written anything to the Iron and Steel Controller in Calcutta about the quota.

Sri B. D. JATTI.—What is the use of your making remarks without knowing what year's quota it was and what was the type of quota and all that.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ಇದುವರೆಗೂ ನನ್ನ ಸ್ನೇಹಿತರು ಹೇಳಿದುದನ್ನು ತಾವು ಕೊಟ್ಟಂಥ ಬುದ್ಧಿವಾದವನ್ನು ಕೇಳಿದ್ದೇನೆ. ಈ ವರದಿಯ ಮೇಲೆ ಮಾತನಾಡುವುದಕ್ಕೆ ಕಷ್ಟ, ಬಹಳ ಬುದ್ಧಿವಂತಿಕೆಯಿಂದ ಓದಿಕೊಂಡು ಬಂದಿದ್ದು ಅದನ್ನೂ ಸ್ವಲ್ಪ ಮಥನವಾಡಿದರೆ ಮಾತ್ರ ಸಾಧ್ಯವೆಂದು ತಾವು ಅಪ್ಪಣೆ ಕೊಡಿಸಿದ್ದು ಬಹಳ ಒಳ್ಳೆಯ ಕೆಲಸ. ಈ ವರದಿಯ ಮೇಲೆ ಮಾತನಾಡುವಾಗ ಏನು ಮಾತನಾಡಬೇಕೆಂಬ ಪರಿಜ್ಞಾನ ನನ್ನ ಮೈಮೇಲೆ ತುಂಬ ಇದೆ. ಸರ್ಕಾರದಲ್ಲಿ ಹಣಕಾಸಿನ ವಿಚಾರದಲ್ಲಿ ನಡೆದಿರುವ ದುರಾಡಳಿತ, ಹಣಕಾಸನ್ನು ಖರ್ಚುಮಾಡುವಾಗ ಎಷ್ಟರಮಟ್ಟಿಗೆ ಎಷ್ಟರ ತಪ್ಪಿದ್ದಾರೆ, ಅಧಿಕಾರಗಳನ್ನು ಎಷ್ಟರಮಟ್ಟಿಗೆ ನಡಿಲಬಿಟ್ಟಿದ್ದಾರೆ, ಎನ್ನುವ ವಿಚಾರಗಳ ಬಗ್ಗೆ ಸರ್ಕಾರದ ಗಮನಕ್ಕೆ ತಮ್ಮ ಮೂಲಕ ತರಬೇಕೆಂದು ನಿಂತಿದ್ದೇನೆ. ಈ ವರದಿಯ ಮೇಲೆ ಮಾತನಾಡುವುದಕ್ಕೆ ಮುಂಚೆ, ಈ ಸಭೆಯಿಂದ ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಆರಿಸಲ್ಪಟ್ಟ ಜನ ಯಾವುದೇ ಪಕ್ಷಕ್ಕೆ ಸೇರಿದ್ದರೂ ಕೂಡ ಪ್ರಜಾಪ್ರಭುತ್ವವನ್ನು ನಾವು ಭದ್ರವಾದ ಬುನಾದಿಯ ಮೇಲೆ ಕಟ್ಟಬೇಕು ಎನ್ನುವ ದೃಷ್ಟಿಯಿಂದ ಪ್ರಜಾಪ್ರಭುತ್ವವನ್ನು ಉಳಿಸಬೇಕೆನ್ನುವ ದೃಷ್ಟಿಯಿಂದ ಏನೇನು ಲೋಪದೋಷಗಳಿವೆ ಎಂಬುದನ್ನು ತೋರಿಸಿ ಕೊಟ್ಟಿರುವುದರಿಂದ ನಿಜವಾಗಿಯೂ ಸ್ತುತ್ಯವಾದ ಕೆಲಸ ಮಾಡಿದ್ದಾರೆಂದು ಹೇಳುತ್ತೇನೆ. ನನ್ನ ಸ್ನೇಹಿತರಾದ ಮಾನ್ಯ ಮಹಮ್ಮದಾಲಿಯವರು ಮತ್ತು ಕಮಿಟಿಯ ಸದಸ್ಯರು ಈ ಸಭೆಯ ಸದಸ್ಯರ ಮತ್ತು ದೇಶದ ಜನಗಳ ಗೌರವಕ್ಕೆ, ಅವರ ಮನ್ನಣೆಗೆ ಪಾತ್ರರಾಗುತ್ತಾರೆಂದು ನಾನು ಏಕ ಕಂಠದಿಂದ, ತುಂಬಿದ ಮನಸ್ಸಿನಿಂದ ಈ ಸಭೆಯಲ್ಲಿ ತಮ್ಮ ಮುಂದೆ ಹೇಳಬೇಕಾಗಿದೆ. ಯಾರು ರಾಜ್ಯಭಾರ ಮಾಡಿದರೂ, ಯಾರೂ ಅಧಿಕಾರಕ್ಕೆ ಹತ್ತಿದರೂ, ಹಣಕಾಸಿನ ವಿಚಾರದಲ್ಲಿ ದಿಟ್ಟತನದಿಂದ, ಸೂಕ್ಷ್ಮ ಬುದ್ಧಿಯಿಂದ, ಜೋಪಾನವಾಗಿ ನಡೆಯಬೇಕು ಎಂದು ತಿಳಿಸಿದ್ದಾರೆ. ಆಡಳಿತ ನಡೆಸಲು ಯೋಗ್ಯತೆ ಇಲ್ಲದಿದ್ದರೆ, ಅಧಿಕಾರ ಲಾಲಸೆಯಿಂದ ಮುಂದೆ ಬರಬೇಡಿ, ಹಿಂದಿನ ಬೆಂಚಿನಲ್ಲಿ ಕುಳಿತುಕೊಂಡು 250 ರೂಪಾಯಿ ತೆಗೆದುಕೊಳ್ಳಿ, ಮುಂದೆ ಬಂದು, ಸರ್ಕಾರದ ಕಾರುಗಳಲ್ಲಿ ಕುಳಿತುಕೊಂಡು ದೇಶದ ಹಣವನ್ನು ಅನ್ಯಾಯ ಮಾಡಬೇಡಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಇದೆಲ್ಲ ವರದಿಯ ಯಾವ ಭಾಗದಲ್ಲಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಬ್ಲಿಕ್ ಅಕೌಂಟ್ಸ್ ಕಮಿಟಿಯ ರಿಪೋರ್ಟಿನ ಸಂಬಂಧದಲ್ಲಿ ಇದನ್ನು ಪ್ರಾಸಂಗಿಕವಾಗಿ ಹೇಳುತ್ತಿದ್ದೇನೆ. ಅಧಿಕಾರ ಮಾಡತಕ್ಕ ಜನಗಳಿಗೆ ಎಚ್ಚರಿಕೆ ಕೊಡುವುದಕ್ಕೋಸ್ಕರವಾಗಿ ಇದನ್ನೆಲ್ಲ ನಾನು ಹೇಳಿದ್ದೇನೆ ಅದನ್ನೇ ಕಮಿಟಿಯವರೂ ಹೇಳಿದ್ದಾರೆ.

ಅಧ್ಯಕ್ಷರು.—ಎಚ್ಚರಿಕೆ ಕೊಡುವ ಪ್ರಶ್ನೆಯಿಲ್ಲ. ರೆಕಮೆಂಡೇಷನ್‌ನಲ್ಲಿ ಏನೇನು ಹೇಳಿದ್ದಾರೆ, ಅದರಲ್ಲಿ ಸತ್ಯವಿದೆ ಎಂದು ಬೇಕಾದರೆ ಹೇಳಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಅಲ್ಲಿಗೇ ಬರುತ್ತಿದ್ದೇನೆ. 1956 ನೆಯ ಇಸವಿ ನವಂಬರ್ ಒಂದನೆಯ ತಾರೀಖಿನಿಂದ ಶ್ರೀವರ್ಗ ಮರಿಯಪ್ಪನವರು ಮಂತ್ರಿಗಳಾಗಿದ್ದಾರೆ. ಇವೊತ್ತು 1961 ನೆಯ ಇಸವಿ ನವಂಬರ್ 23 ನೆಯ ತಾರೀಖು ನಾಲ್ಕು ಗಂಟೆ, 25 ನಿಮಿಷ

ವರೆಗೂ ಏನು ಆಡಳಿತ ನಡೆಸಿದ್ದಾರೆ, ಅವರು ಹಣಕಾಸಿನ ವಿಚಾರದಲ್ಲಿ ಏನು ದಾಂಧಲೆ ಮಾಡಿದ್ದಾರೆ ಎಂಬುದನ್ನೆಲ್ಲ ಹೇಳುವುದಕ್ಕೋಸ್ಕರವಾಗಿ ಇದನ್ನು ನಾನು ಪ್ರಾಸಂಗಿಕವಾಗಿ ಹೇಳಿದ್ದೇನೆ. ಈ ವರದಿಯ ಮೇಲೆ ಮಾತನಾಡುವಾಗ ಸರ್ಕಾರಎಲ್ಲಿ ತಪ್ಪುಮಾಡಿದೆ ಎಂದು ನನ್ನ ಸ್ನೇಹಿತರು ಹೇಳಿದಾಗ, ಎಷ್ಟನೆಯ ಪುಟದಲ್ಲಿದೆ, ಎಷ್ಟನೆಯ ಪ್ಯಾರದಲ್ಲಿದೆ ಎಂದು ಹಣಕಾಸಿನ ಮಂತ್ರಿಗಳು ಆಗಾಗ ಮಧ್ಯೆ ಬಾಯಿಹಾಕಿ cross examine ಮಾಡುತ್ತಿದ್ದರು ನನ್ನ ಸ್ನೇಹಿತರಾದ ಶ್ರೀ ನರಸಿಂಹನ್ ಅವರು ಮಾತನಾಡುತ್ತ ಗೌರವಯುತರಾಗಿದ್ದರೆ, ನಿಜವಾಗಿಯೂ ದೇಶದ ಹಣವನ್ನು ರಕ್ಷಣೆ ಮಾಡುವುದಿದ್ದರೆ, ದೇಶದ ಹಣಕಾಸನ್ನು ಭದ್ರವಾಗಿಡುವುದಿದ್ದರೆ, ಇಷ್ಟೊಂದು ತಪ್ಪುಮಾಡಿಯೂ ರಾಜ್ಯಬಾರ ಮಾಡುತ್ತಿರಲಿಲ್ಲವೆಂದು ಹೇಳಿದರು.

ಅಧ್ಯಕ್ಷರು.—ಪುಟ ಮತ್ತು ಪ್ಯಾರಾ ಯಾವುದು ಎಂಬುದನ್ನು ಹೇಳಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೇಳುತ್ತೇನೆ ಸ್ವಾಮಿ, ಆಡಿಟ್ ಅಬ್ಜೆಕ್ಷನ್ ಸಂಬಂಧದಲ್ಲಿ 1950–51 ರಿಂದ 1958–59 ರ ವರೆಗೂ ಮೈಸೂರು ಸಂಸ್ಥಾನದಲ್ಲಿ ಸರ್ಕಾರ ಆಡಳಿತ ನಡೆಸುವಂಥ ಕಾಂಗ್ರೆಸ್ ಪಕ್ಷ 24,437 objections ಗೆ ಇವೊತ್ತಿನವರೆಗೂ ಉತ್ತರವನ್ನು ಕೊಟ್ಟಿಲ್ಲ. ಆರನೆಯ ಪುಟದಲ್ಲಿ ಹನ್ನೊಂದನೆಯ ಪ್ಯಾರದಲ್ಲಿ :

> "Year after year, the Committee have been expressing their displeasure over the deteriorating position regarding the mounting audit objections."

ಎಂದು ಹೇಳಿದ್ದಾರೆ. 1950–51 ರಿಂದ 1958–59ರ ವರೆಗೆ 24,437 audit objectons outstanding ಇದರಲ್ಲಿ involve ಆಗಿರುವ ಹಣ 25,36,32,730 ರೂಪಾಯಿ. ಈ ವಿಷಯ ಚುಕ್ಕೆಯ ಗುರುತು ಇಲ್ಲದ ಪ್ರಶ್ನೆಗಳಿಗೆ ಸರ್ಕಾರ ಕೊಟ್ಟಿರುವ ಉತ್ತರದಲ್ಲಿದೆ.

ಶ್ರೀ ವಿ. ಶ್ರೀನಿವಾಸಶೆಟ್ಟಿ.—69 ನೆಯ ಪುಟದ ಎರಡನೆಯ ಪ್ಯಾರಾದಲ್ಲಿರುವುದನ್ನು ನೋಡಿದರೆ ಗೊತ್ತಾಗುತ್ತದೆ. ಅಲ್ಲಿ ಹೀಗೆ ಹೇಳಿದ್ದಾರೆ :

> "The total number of objections raised to end of March 1959 and outstanding in the books of the audit office on 31st August 1959 was 46,355 with a money value of over Rs. 25·36 crores.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1950–51 ರಿಂದ ಉಳಿದಿರುವ ಆಡಿಟ್ ಅಬ್ಜೆಕ್ಷನ್‌ಗಳ ವಿವರ ಹಾಗಿದೆ.

1950–51	62
1951–52	351
1952–53	438
1953–54	931
1954–55	1474
1955–56	2546
1956–57	3630
1957–58	5786
1958–59	9219
outstanding audit objection ...	24,437

ಅಧ್ಯಕ್ಷರು.—69ನೆಯ ಪುಟದಲ್ಲಿ ಎರಡನೆಯ ಪ್ಯಾರಾದಲ್ಲಿ ಮುಂದೆ ಓದಿ.

"The number and money value of the objections pertaining to this period still remaining to the cleared on 30th June 1961 are 24,437 and Rs. 13·2 crores respectively"

ಎಂದು ಹೇಳಿದ್ದಾರೆ. ಆದುದರಿಂದ 25 ಕೋಟಿ ರೂಪಾಯಿಗಳು objectionನಲ್ಲಿಲ್ಲ. ಅದು 13·2 ಕೋಟಿ ಮಾತ್ರ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರದಿಂದ ಕೆಲಸಕ್ಕೆ ಉತ್ತರ ಕೊಟ್ಟಿದ್ದಾರೆ.

4-30 P.M.

ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಶ್ರೀಮಾನ್ ನರಸಿಂಹನ್ ಅವರು ಮತ್ತು ನನ್ನ ಸ್ನೇಹಿತರಾದಂಥ ಶ್ರೀಮಾನ್ ನರಸಿಂಹೇಗೌಡರು ಮಾತನಾಡುತ್ತಿರುವಾಗ ಇದು ಯಾವ ವರ್ಷಕ್ಕೆ ಸಂಬಂಧಪಟ್ಟದು ಎಂದು ಕೇಳಿದರು.

ಶ್ರೀ ಟಿ. ಮರಿಯಪ್ಪ.—ನಾವು ಕನ್‌ಸ್ಟ್ರಕ್ಟೀವ್ ಆಗಿ ಹೋಗುತ್ತಿದ್ದೇವು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1952 ರಿಂದ 1955ರ ವರೆಗೆ ಯಾವ ಮಾನ್ಯ ಹಣಕಾಸಿನ ಸಚಿವರು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಸದಸ್ಯರಾಗಿದ್ದರೋ ಅವರು ಮಾಡಿರತಕ್ಕ ಅಬ್‌ಜರ್‌ವೇಷನ್ಸನ್ನು ನೋಡಿದರೆ ನಾವು ಹೇಳತಕ್ಕದ್ದು ಎಂದು ಒಳ್ಳೆಯ ಮಾಡಲ್ ಆಗಿದೆ. ಒಂದು ಒಳ್ಳೆಯ ಕನ್‌ಸ್ಟ್ರಕ್ಟಿವ್ ಆಗಿದೆ. 54 ರಿಂದ ಬಹಳ ವರ್ಷಗಳಾಗಿಲ್ಲ. ಆದರೆ ಹಿಂದೆ ತಮ್ಮ ಪಕ್ಷದವರೇ ಮಾಡಿದ್ದನ್ನು ನೀವು ಈಗ ಕಸಬಿಸಿ ಮಾಡಿ ಅವರ ಕಾಲದಲ್ಲಿ ಏನೇನಾಯಿತೋ ಅವೆಲ್ಲವನ್ನು ಬೆಳಕಿಗೆ ನೋಡಿ ಹೇಳುವುದರಿಂದ ನಂತರ 56 ರಿಂದ 59ರ ವರೆಗೆ ಇರತಕ್ಕ ಲೆಖ್ಖವನ್ನು ನೋಡಿದ್ದೇ ಆದರೆ ಇವರ ಕಾಲದಲ್ಲಿಯೇ ಸುಮಾರು 18 ಸಾವಿರ ಆಡಿಟ್ ಅಬ್ಜೆಕ್ಷನ್ನುಗಳು ಇವೆಯೆಂಬುದು ತಿಳಿದು ಬರುತ್ತದೆ. ಅಂದಮೇಲೆ ಈ ರೀತಿ ಅರ್ಥ ಸಚಿವರು ಈ ದೇಶದಲ್ಲಿ ಮಾಡಿರತಕ್ಕ ಅನರ್ಥ ಎಷ್ಟುದೂರ ಹೋಗಿದೆ ಎಂದು ಕಣ್ಣಿನಲ್ಲಿ ಕಣ್ಣು ಇಟ್ಟು ದೀಪದಲ್ಲಿ ನೋಡಿದರೆ ಮೈಸೂರು ಸರ್ಕಾರದ ಹಣಕಾಸಿನ ಪರಿಸ್ಥಿತಿ ಇವತ್ತಿನ ದಿವಸ ದಿವಾಳಿ ಆಗುವ ಸ್ಥಿತಿಯಲ್ಲಿದೆ ಎಂದು ನಾನು ಹೇಳಬೇಕಾಗಿದೆ. ನೀವು ಹಿಂದೆ ಹೇಳಿದ್ದ ಮಾತುಗಳಲ್ಲಿ ಯಾವುದೂ ನೆಟ್ಟಗಿಲ್ಲ. ಇದು ನಿಮಗೆ ನ್ಯಾಯವೇ, ನಿಮ್ಮ ಕೈಲಿ ನಿಜವಾಗಿ ನ್ಯಾಯ ದೊರಕುತ್ತದೆಯೇ ಎಂದು ದೇಶದ ಜನತೆಗೆ ಹೇಳಬೇಕಾಗಿದೆ.

ಶ್ರೀ ಎಂ. ಸಿ. ನರಸಿಂಹನ್.—ಇವರನ್ನು ಅದಕ್ಕೆ ಚೇರ್‌ಮನ್ನರನ್ನಾಗಿ ಮಾಡಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆದರೂ ಒಟ್ಟಿನಲ್ಲಿ ನಾನು ಹೇಳುವುದಾದರೆ ನನ್ನ ಸ್ನೇಹಿತರಾದಂಥ ಶ್ರೀಮಾನ್ ಮಹಮ್ಮದಾಲಿಯವರು ಈ ದೇಶದ ಹಿತಕ್ಕೋಸ್ಕರ ಒಂದು ಒಳ್ಳೆಯ ಕೆಲಸವನ್ನೇ ಮಾಡಿದ್ದಾರೆ.

Mr SPEAKER.—The House will now rise and meet again after half-an-hour.

The House adjourned for recess at Thirty Two Minutes past Four of the Clock and reassembled at Five of the Clock.

5-00 P.M.

[Mr. SPEAKER in the Chair.]

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈ ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿಯ 13ನೇ ಪ್ಯಾರಾದಲ್ಲಿ ದೇಶ ಅಧಿಕಾರಿಗಳು ಈ ದೇಶದ ಹಣವನ್ನು ಖರ್ಚು ಮಾಡುವಾಗ ದೇಶದಲ್ಲಿ ನಿಜವಾಗಿ ಸರ್ಕಾರ ಇದೆಯೋ ಇಲ್ಲವೋ ಎಂಬ ಮನೋಭಾವನೆಯನ್ನು ತಾಳಿ ಎಷ್ಟು ಬೇಜವಾಬ್ದಾರಿಯಿಂದ ಆಡಳಿತವನ್ನು ನಡೆಸುತ್ತಿದ್ದಾರೆಂಬುದನ್ನು ಕಮಿಟಿಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ಇದರಿಂದೆಂದಿಗೂ ಒಳ್ಳೆಯದಾಗುವುದಿಲ್ಲ. ಇದಕ್ಕಿಂತಲೂ ಇನ್ನು ಬೇಕೆ ಏನಾದರೂ ಸಂಗತಿ ಬೇಕೇ ಎಂದು ನಾನು ಕೇಳುತ್ತೇನೆ. ಒಂದು ವೇಳೆ ಅಕೌಂಟೆಂಟ್ ಜನರಲ್ ಅವರು ಇದನ್ನೆಲ್ಲಾ ಚೆನ್ನಾಗಿ ಲೆಖ್ಖಾಚಾರ ಮಾಡಬೇಕು, ಚರ್ಚೆ ಮಾಡಬೇಕು, ಆಡಿಟ್ ಅಬ್ಜಕ್ಷನ್ನುಗಳನ್ನು ಏನಾದರೂ ಮಾಡಿ ಕಮ್ಮಿ ಮಾಡಬೇಕು ಎಂಬ ಬಗ್ಗೆ ಒಂದು ಮೀಟಿಂಗ್ ಕರೆದರೆ ಅಧಿಕಾರಿಗಳು ಮೀಟಿಂಗಿಗೆ ಬಾರದೇ ಇದ್ದರೆ ಅವರು ಏನು ಮಾಡುವುದಕ್ಕಾಗುತ್ತದೆ? ಈ ರೀತಿಯಲ್ಲಿ ಅಧಿಕಾರಿಗಳಿಗೆ ಆಡಳಿತದಲ್ಲಿ ಇಷ್ಟು ಬೇಜವಾಬ್ದಾರಿ ಬೆಳೆಯುತ್ತಿದ್ದರೆ ದೇಶದಲ್ಲಿ ಅನ್ಯಾಯವಾಗಿ ಹಣಕಾಸು ಖರ್ಚಾಗುತ್ತಿರುವುದನ್ನು ಸರಿಪಡಿಸುವುದಕ್ಕೆ ಮತ್ತು ಆಡಳಿತದ ಲೋಪ ದೋಷಗಳನ್ನು ಪರಿಹರಿಸುವುದಕ್ಕೆ ಹೇಗೆ ಸಾಧ್ಯವೆಂದು ನಾನು ಪ್ರಶ್ನೆ ಕೇಳುತ್ತೇನೆ. ಏತಕ್ಕೋಸ್ಕರ ಸರಿಯಾದ ರೀತಿಯಲ್ಲಿ ಮೊದಲನಿಂದಲೂ ಈ ಬಗ್ಗೆ ವ್ಯವಹಾರ ಮಾಡಲಿಲ್ಲ, ಅಧಿಕಾರಿಗಳ ಮೇಲೆ ಸರಿಯಾದ ಕಂಟ್ರೋಲ್ ಮಾಡಲಿಲ್ಲವೆಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಅಕೌಂಟೆಂಟ್ ಜನರಲ್ ಅವರು ನಿಮ್ಮ ಆಫೀಸರು ಅಲ್ಲ, ಮೈಸೂರು ಸರ್ಕಾರದ ಆಫೀಸರು ಅಲ್ಲ, ಕೇಂದ್ರ ಸರ್ಕಾರದ ಆಫೀಸರ್ ಅವರು. ಅಂತಹವರು ಮಾಡಿರತಕ್ಕ ಅಬ್‌ಜರ್‌ವೇಷನ್‌ಗಳನ್ನು ಈ ಸರ್ಕಾರ ಸರಿಯಾಗಿ ಪಾಲನೆ ಮಾಡದೆ ಹೋದರೆ ಇನ್ನೆಷ್ಟು ಕಾಲಕ್ಕೆ ಈ ಅಬ್‌ಜಕ್ಷನ್ನುಗಳನ್ನು ಕ್ಲಿಯರ್ ಮಾಡುವುದಕ್ಕೆ ಸಾಧ್ಯವೆಂದು ನಾನು ಈ ಸರ್ಕಾರಕ್ಕೆ ಕೇಳಬೇಕಾಗಿದೆ.

ಪುಟ 9 ರಲ್ಲಿರುವ ಪ್ಯಾರ 16 ನ್ನು ಓದಿದರೆ ಚೆನ್ನಾಗಿ ಗೊತ್ತಾಗುವುದು. ಹೇಳುವುದು ಒಂದೇ, ಎರಡೇ, ಮೂರೇ ನಾಲ್ಕೇ, 5893 ಕೆಲಸಗಳನ್ನು ಮಾಡುವಾಗ ಎಸ್ಟಿಮೇಟುಗಳಿಲ್ಲದೇನೇ ಇಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂದು ಹೇಳಬೇಕಾಗಿದೆ. ಇದರಲ್ಲೇ ಹೀಗೆ ಹೇಳಿದ್ದಾರೆ:

> "16. It is seen from the Appropriation Accounts relating to Public Works Grants that a total outlay of nearly Rs. 3 crores has been incurred by Government during the year on as many as 5,893 works which were undertaken for execution in the Department without sanction to estimates............"

ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ, ಆಡಿಟ್ಟಿನವರು ಮಾಡಿರತಕ್ಕ ಪ್ರತಿಯೊಂದು ಅಕ್ಷರದಲ್ಲಿಯೂ ಅರ್ಥವನ್ನು ಕಲ್ಪನೆ ಮಾಡಿಕೊಂಡು ಮಾಡುತ್ತಿರುವ ಈ ಸರಕಾರದ ಅಧಿಕಾರಿಗಳ callousness ಮತ್ತು ಅಧಿಕಾರಿಗಳ ಒಂದು ಧೋರಣೆ, ಮತ್ತು ಸರಕಾರದ ಹಣ ಕಾಸಿನ ಮೇಲೆ ಹತೋಟಿ ಇಲ್ಲದೆ ಮನಸ್ಸೋಇಚ್ಛೆಯಾಗಿರುವುದಕ್ಕಿಂತ ಸೀರಿಯಸ್ ಆಗಿರುವುದು ಇನ್ನಾವುದಿದೆ ಎನ್ನುವುದನ್ನು ಸರಕಾರ ಈಗಲಾದರೂ ಒಪ್ಪಿಕೊಳ್ಳುತ್ತಾರೆಯೇ ಸ್ವಾಮಿ? ಎಂದು ನಾನು ಕೇಳುತ್ತೇನೆ. ಶ್ರೀಮಾನ್ ಮರಿಯಪ್ಪನವರು ನಮ್ಮ ದೇಶದಲ್ಲಿ ಆರ್ಥಿಕ ಸ್ಥಿತಿ ಭದ್ರವಾಗಿದೆ, ಎಂದು ಹೇಳುವಂತೆ ನಮ್ಮ ದೇಶದ ಜನತೆಗೂ ಅವರ ಕಾಲದಲ್ಲಿ ಅನುಕೂಲವಾಗಬೇಕೆಂಬುದೇ ನಮ್ಮ ಆಸೆ. ಇದರ ಬಗ್ಗೆ ಸರಕಾರದ ಹಣಕಾಸಿನ ಪರಿಸ್ಥಿತಿಯು ಭದ್ರತೆ ಹೇಗಿದೆ ಮತ್ತು ಎಷ್ಟು ನ್ಯಾಯವಾಗಿ ಖರ್ಚಾಗಿದೆ ಎನ್ನುವುದನ್ನು ಗಮನವಿಟ್ಟು ಈ ಪಬ್ಲಿಕ್ ಅಕೌಂಟ್ಸ್ ಸಮಿತಿಯ ವರದಿಯನ್ನು ನೋಡದೆ ಹೋದರೆ ಇಂತಹ ವರದಿಯನ್ನು ಈ ಸಭೆಯ ಮುಂದಿಟ್ಟು ಅದಕ್ಕೆ ತಕ್ಕ ಪ್ರತಿಫಲ ದೊರೆಯದಿದ್ದರೆ, ಈ ದೇಶಕ್ಕೆ ಆರ್ಥಿಕ ಭದ್ರತೆ ಎಲ್ಲಿಂದ ಬರುತ್ತದೆ ಎನ್ನುವುದನ್ನು ಸರಕಾರದ ಮುಂದೆ ಹೇಳಬೇಕಾಗಿದೆ.

(ಶ್ರೀ ಸಿ. ಜೆ. ಮುಚ್ಚಕಣ್ಣಪ್ಪ)

ಈ ವರದಿಯ ಪ್ಯಾರಾ 17 ರಲ್ಲಿ ಓದಿ ನೋಡಿದರೆ ಅಧಿಕಾರಿಗಳು ಏನೇನು ಮಾಡಿದ್ದಾರೆನ್ನುವುದು ಚೆನ್ನಾಗಿ ಗೊತ್ತಾಗುತ್ತದೆ.

> "17. As regards abstract contingent Bills, the Accountant General pointed out that the amounts drawn thereon by officers of several departments are not being accounted for months and years together."...... ......

ಇದು ಸರಿಯೇ ಎಂದು ನಾನು ಇಲ್ಲಿ ಕೇಳುತ್ತೇನೆ. ಹೀಗೆ ದೇಶದಲ್ಲಿ ದುಡ್ಡು ಕೊಟ್ಟರೆ ದೇಶವೇ ನಾಗುತ್ತದೆ? ಇಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು ಸರ್‌ಪ್ಲೆಸು ಬಡ್ಜೆಟ್ಟು, ಡಿಫಿಸಿಟ್ಟು ಬಡ್ಜೆಟ್ಟು ತಂದಿದ್ದೇವೆಂದು ಇಲ್ಲಿ ನಮ್ಮ ಮುಂದೆ ತಂದಿಡುತ್ತಿದ್ದಾರೆ. ಹೀಗಿರುವಾಗ ಅವರು ಈ ವರದಿಯಲ್ಲಿ:

> "The total amount outstanding unaccounted for was estimated to be over rupees one crore and some of the cases relate to periods as far back as 1951–52. The facility of drawing amounts on Abstract Contingent Bills is afforded primarily for meeting emergent payments necessitated by unforeseen circumstances like famine, flood, etc., so as to afford quick relief to the public at large. This facility does not mean that the officers who draw the money should be callous in not rendering the detailed accounts within a reasonable time."

......ಎಂದು

ಹೀಗೆ ಹೇಳಿದರೆ ಏನು ಅರ್ಥ ಸ್ವಾಮೀ? ಹಣವನ್ನು ಖರ್ಚು ಮಾಡಿ ಅದಕ್ಕೆ ಸರಿಯಾದ ಕಾಲಕ್ಕೆ ಲೆಕ್ಕ ಪತ್ರಗಳನ್ನು ಮಾಡದೇಹೋದರೆ ಏನರ್ಥ? ಪಟೇಲ, ಶಾನುಭೋಗರುಗಳು ಇರಸಾಲು ಹಣವನ್ನು ಕಟ್ಟುವಾಗ ಸ್ವಲ್ಪ ಕಡಿಮೆಯಾಗಿ ಕಟ್ಟಿದ್ದಾರೆಂದು, ಅನ್ ಅಕೌಂಟು ಆಗಿದೆ ಎಂದು ಅವರನ್ನು ಹಾಲ್‌ಅಪ್ ಮಾಡಿ ಅವರಿಗೆ ಕನ್‌ವಿಕ್ಷನ್ನನ್ನು ವಿಧಿಸುತ್ತೀರಿ. ಆದರೆ ಹೀಗೆ ಎರಡು ಕೋಟಿಯಷ್ಟು ರೂಪಾಯಿಗಳ ಹಣವನ್ನು ಖರ್ಚು ಮಾಡಿರುವುದಕ್ಕೆ ತಾವು ಲೆಕ್ಕ ಪತ್ರಗಳನ್ನು ಮತ್ತು ದಾಖಲೆ ಕಾಗದಗಳನ್ನು ಕೊಡದೇ ಹೋದರೆ ಅಂತಹ ಅಧಿಕಾರಿಗಳ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಹೀಗೆ ಹಣಕಾಸಿನ ಮೇಲೆ ಸರಿಯಾದ ದಕ್ಷತೆಯನ್ನು ಇಟ್ಟುಕೊಳ್ಳದಂತಹ ಅಧಿಕಾರಿಗಳ ಮೇಲೆ ಈ ಸರಕಾರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲು ಆಗದೇ ಇರುವುದು ಜನತೆಗೆ ಮಾಡುವ ಮಹಾಪರಾಧ. ಇದಕ್ಕಾಗಿ ಈ ರಾಜ್ಯದಲ್ಲಿ ನೀವು ಆಳುವುದಕ್ಕೆ ಲಾಯಕ್ಕಾದವರಲ್ಲ ಎಂದು ನಾನು ಹೇಳಬೇಕಾಗಿದೆ.

ಇನ್ನು ಹಾಗೆ ಪುಟ 13 ರಲ್ಲಿರುವ ಪ್ಯಾರಾ 20 ರಲ್ಲಿ ನೋಡಿ.

> "Similarly, under certain grants, like '20, Education' '23, Agriculture, etc.,' '28. Miscellaneous Departments' '38–Miscellaneous' and '48–Capital Outlay on Improvement of Public Health', instances of provision of funds towards immature schemes were also noticed. The Committee were unable to appreciate why in these cases funds should have at all, have been provided when the schemes were not ready for implementation."

ಇದರಲ್ಲಿರುವ ಒಂದೊಂದು ಅಕ್ಷರವನ್ನು ಓದಿ ನೋಡಿದರೆ ಆ ಕೂಡಲೇ ಈ ಸರಕಾರ ರಾಜೀನಾಮೆ ಕೊಡಬೇಡವೇ? ಈ ದೇಶದ ಜನತೆಯ ರಕ್ಷಣೆ ನಿಮ್ಮ ಕೈಯಲ್ಲಾಗುತ್ತದೆಯೇ? ಖಂಡಿತ ರಕ್ಷಣೆ ಸಿಗುವುದಿಲ್ಲ ಎಂದು ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳಾದ ಮರಿಯಪ್ಪನವರಿಗೆ ಇಲ್ಲಿ ಹೇಳಬೇಕಾಗಿದೆ. ಅಧಿಕಾರಿಗಳು ದೇಶದ ಹಣಕಾಸಿನ ವಿಚಾರದಲ್ಲಿ ಇಷ್ಟು ಕ್ಯಾಲಸ್‌ನೆಸನ್ನು ತೋರಿಸಬು

ಕಾರಣವೇನು? 1952-53 ನೇ ಸಾಲಿನ ಮತ್ತು 1953-54 ನೇ ಸಾಲಿನ ಆಡಿಟ್ಟು ವರದಿಯನ್ನೂ ಈ ಸಮಿತಿಗೆ ಕೊಟ್ಟಿಲ್ಲ.

ಶ್ರೀಮಾನ್ ಮರಿಯಪ್ಪನವರೇ, ತಾವು 1954ರಿಂದ 1961 ನೇ ಇಸವಿ ನವೆಂಬರು 23ನೇ ತಾರೀಖು ಸಾಯಂಕಾಲದವರೆಗೆ ಈಗ ಸುಮಾರು 5-20 ಗಂಟೆ,ಇಲ್ಲಿಯವರೆಗೆ ಮೈಸೂರು ದೇಶದ ಆರ್ಥಿಕ ಸಚಿವರು. ಅಂತಹ ನಿಮ್ಮಲ್ಲಿ ಏಕೆ ಇಷ್ಟು ಮರವೆ ಬಂತು? ಇಷ್ಟು ಅನುಮಾನ ಬರಲು ಕಾರಣವೇನು? ಒಂದು ಕಡೆಯಲ್ಲಿ 6,000 ರೂಪಾಯಿಗಳ ಬಿಲ್ಲನ್ನು ಎಸ್ಟಿಮೇಟಿಲ್ಲದೇ ಮಂಜೂರು ಮಾಡುತ್ತೀರಿ, ಇನ್ನೊಂದು ಕಡೆಯಲ್ಲಿ ಪ್ಲಾನಿನ ಪ್ರಕಾರ ಸ್ಕೀಮುಗಳನ್ನು ಮಾಡುವುದಕ್ಕಾಗಿ ಎಂದು ಹಣವನ್ನು ಖರ್ಚು ಮಾಡುತ್ತಿದ್ದೀರಿ. ಹೀಗೆ ಒಂದೊಂದು ಸಾರಿ ಒಂದೊಂದು ಏಕೆ ಹೇಳುತ್ತೀರಿ?

Sri T. MARIAPPA.—We will not allow them to spend unless it is again referred back to Finance Department.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇನ್ನೊಂದು ದುಃಖಕರವಾದ ಸಂಗತಿಯನ್ನು ಇಲ್ಲಿ ಹೇಳಬೇಕಾಗಿದೆ. ತಾವು ಹತ್ತು ಕೋಟಿಯಷ್ಟು ಸಾಲವನ್ನು ಕೇಳಿದಾಗ ಮೂರು ಗಂಟೆಯೊಳಗೆ ಪೂರ್ತಿಯಾಗಿ ತುಂಬಿಹೋಯಿತು, ಇನ್ನೊಂದು ಸಾರಿ ಸಾಲವನ್ನು ಕೇಳಿದಾಗ ಎರಡೂವರೆ ಗಂಟೆಯೊಳಗಾಗಿಯೇ ತುಂಬಿಹೋಯಿತು ಎಂದು ಹೇಳುತ್ತಾರೆ. ನಿಮಗೆಲ್ಲಾ ಹಣವನ್ನು ಕೊಟ್ಟವರು ಯಾರು? ಏನಾದರೂ ಈ ದೇಶದ ಹಳ್ಳಿಯ ರೈತರಿಂದಲೇನಾದರೂ ದುಡ್ಡು ಬಂತೇನು? ಹಳ್ಳಿಯ ರೈತಾಪಿ ಜನರ ಆರ್ಥಿಕ ಮಟ್ಟವನ್ನು ಆಗಲೀ ಅಥವಾ ನೈತಿಕ ಮಟ್ಟವನ್ನಾಗಲೀ, ಅಥವಾ ಅವರ ಹಣಕಾಸಿನ ಪರಿಸ್ಥಿತಿಯನ್ನು ಎಷ್ಟರಮಟ್ಟಿಗೆ ಸಹಾಯ ಮಾಡಿದ್ದಾರೆ ಎನ್ನುವುದು ಈ ಪಬ್ಲಿಕು ಅಕೌಂಟು ಸಮಿತಿಯ ವರದಿಯಿಂದ ಚೆನ್ನಾಗಿ ಅರ್ಥವಾಗುತ್ತದೆ. ಸ್ವಾಮಿ, ಇನ್ನೂ ಮುಂದಕ್ಕೆ ಹೋಗಿ ನೋಡಿದರೆ ಅತಿ ದುಃಖಕರವಾದ ಸಂಗತಿ ಕಂಡು ಬರುತ್ತದೆ. ಇದು ಪುಟ 16, ಪ್ಯಾರಾ 24 ರಲ್ಲಿದೆ. ಸರಿಯಾಗಿ ಕೆಲಸ ಮಾಡಿಸಿ, ಸರಿಯಾದ ರೀತಿಯಲ್ಲಿ ಲೆಕ್ಕಪತ್ರಗಳ ವಿವರ ಇಟ್ಟು,ಹಣ ಖರ್ಚು ಮಾಡಬೇಕಾದುದು ನ್ಯಾಯ. ಹಣವಿಲ್ಲವೆಂದು ಕೆಲಸ ನಿಲ್ಲಿಸಿ ಬಿಡುವುದು ನ್ಯಾಯವೇ? ಹಣಕಾಸಿನ ವಿಚಾರದಲ್ಲಿ ಸರಿಯಾದ ಹಿಡಿತ ಸರಕಾರ ಇಟ್ಟಿಲ್ಲವೆಂದು ವರದಿಯಲ್ಲಿ ಹೇಳಿರುವುದರಿಂದ ಅವರು ಅಭಿನಂದನಾರ್ಹರು. ಇನ್ನು Page 20 Para 30 ರಲ್ಲಿ ಹೀಗೆ ಹೇಳಿದೆ:

"The Committee would particularly draw the attention of Government to the recent defalcation in the Motor Vehicles Taxation Department wherein a loss of nearly 10 lakhs to Government was rendered possible on account of spurious challans."

ಈ ರೀತಿ ಸರಕಾರದ ರಕ್ಷಾಕವಚದ ಕೆಳಗೆ ಹತ್ತು ಲಕ್ಷರೂಪಾಯಿ ಸರಕಾರಕ್ಕೆ ನಷ್ಟವಾದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಏಕೆ ಹಿಡಿಯುವುದಿಲ್ಲ? ಈ ರೀತಿ ಕೆಲಸ ಕಾರ್ಯಗಳು ನಡೆದರೆ ದೇಶದ ರಕ್ಷಣೆಯಾಗುತ್ತದೆಯೇ?

Sri T. MARIAPPA.—The case is *sub-judice*. It is being investigated and FIR has already been sent.

Sri C. J. MUCKANNAPPA.—The Chair has given a ruling that were submission of FIR does not make the case *sub-judice* why is the Minister afraid of opening discussion? Has he something to hide? ಹೀಗೆ ಹತ್ತು ಲಕ್ಷ ರೂಪಾಯಿ ದುರುಪಯೋಗ ಪಡಿಸಿದ್ದನ್ನು ಮುಚ್ಚಿಡುವುದು, ಅವರಿಗೆ ಶಿಕ್ಷೆ ವಿಧಿಸದೇ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇರುವುದು ನ್ಯಾಯವೇ ? ಇಂಥವರು ರಾಜ್ಯಭಾರ ಮಾಡುವುದಕ್ಕೆ ಅನರ್ಹರು. Defalcation of Government money ಅದು ಹೊರಬಿದ್ದರೆ embarrassment to Government ಆಗಿದೆ. ಸರಕಾರದ ಹಣ ದುರುಪಯೋಗವಾದುದು ತೀರ ಅನ್ಯಾಯ ಇಂಥ ಅನ್ಯಾಯ ಪರಂಪರೆಗಳ ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿಯಲ್ಲಿ ನಮೂದಾಗಿವೆ. ಇದರಿಂದ ಈ ಸರಕಾರ ಬೇಜವಾಬ್ದಾರಿಯಿಂದ ರಾಜ್ಯಭಾರ ನಡೆಸುತ್ತಿದೆಂದು ಹೇಳಬಹುದಲ್ಲವೆ ?

ಅಧ್ಯಕ್ಷರು.—ಈಗ misappropriation ಆಗಿದೆ. ಎಂದು ವರದಿಯಲ್ಲಿ ಹೇಳಿದ್ದಾರೆ, ಅದನ್ನು ಒಪ್ಪುತ್ತೀವೆ ಅಥವಾ ಒಪ್ಪುವದಿಲ್ಲ ಇಷ್ಟೇ ಪ್ರಶ್ನೆ ನಮ್ಮ ಮುಂದೆ ಚರ್ಚೆಗೆ ಇದೆ. ಬೇರೆ ವಿಷಯವನ್ನು ಹೇಳುವುದು ಸರಿಯಲ್ಲ.

Sri C. J. MUCKANNAPPA.—They have said evidence was not adduced. Why was that so ? What action was taken against these officers? Will it not indirectly reflect on the administration? There is the Finance Minister, the Education Minister and a band of Ministers and an army of officials. ಇದೇ ಕೊನೆಯ ಅಧಿವೇಶನವಾಗಿದೆ. ಮಹಾ ಚುನಾವಣೆ ಹತ್ತಿರ ಬಂದಿದೆ. ನಾವೆಲ್ಲರೂ ಅಸಮಾಧಾನ ಪಟ್ಟುಕೊಂಡು ಹೋಗಬೇಕೆಂದೇನೂ ಅಲ್ಲ, ಸದಸ್ಯರು ಮಂತ್ರಿಗಳು ಹೋಗುವಾಗ್ಗೆ ನಗುತ್ತಾ ಹೋಗಬೇಕು. On Page 29'' Page 23 ನಲ್ಲಿ ಹೀಗೆ ಇದೆ :

The following irregularities have been brought to notice as a result of the audit of grant in aid to local development works ;

(i) in respect of 1040 works, first instalment of grant to the extent of Rs. 7,96,475 had been paid but the work had not commenced even on 31st March 1958.

ಇದೆಲ್ಲವೂ ಶ್ರೀಮಾನ್ ಲಿಂಗಾರೆಡ್ಡಿಯವರ ಇಲಾಖೆಯ ವೈಖರಿ ಇದಕ್ಕೆ ತಾವು ಏನು ಉತ್ತರ ಹೇಳುತ್ತೀರಿ ? 31ನೇ ಮಾರ್ಚಿ 1958 ನೇ ದಿನದವರೆಗೆ ಲಕ್ಷಾಂತರ ರೂಪಾಯಿ ಮೈಸೂರು ದೇಶದ ಹಣ ಖರ್ಚಾಗದೇ ಉಳಿದದ್ದಕ್ಕೆ ಏನು ಹೇಳುತ್ತೀರಿ ? ಇನ್ನು ಇಂತಹ ಎಷ್ಟು ಕುಂಭಕೋಣ ಮಾಡಿದ್ದೀರಿ ಅದನ್ನು ಹೇಳುತ್ತೇವೆ. ಹಣಕಾಸಿನ ವಿಚಾರದಲ್ಲಿ ಸರಕಾರದ ನೀತಿ ಸರಿಯಾಗಿಲ್ಲ.

5–30 P.M.

ಈ ಕಮ್ಯೂನಿಟಿ ಡೆವಲಪ್‌ಮೆಂಟ್ ಇಲಾಖೆಯ ಉಪ-ಮಂತ್ರಿಗಳು ಕೇವಲ ಟೂರ್ ಮಾಡುವುದು ಒಂದರಲ್ಲೇ ನಿರತರಾಗಿದ್ದಂತೆ ಕಾಣುತ್ತಿದೆ. ದೇಶದಲ್ಲಿ ಎಲ್ಲೆಲ್ಲಿ ಏನೇನು ಕೆಲಸಗಳಾಗಿವೆ, ಎಲ್ಲೆಲ್ಲಿ ಏನೇನು ಕೆಲಸಗಳು ಆಗಬೇಕಾಗಿತ್ತು, ಎಲ್ಲಿ ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳದೆ ಆ ರಾವಣನ ಸಭೆಯಲ್ಲಿ ಆಂಜನೇಯನು ''ನಾನು ನಿನಗಿಂತ ಕಡಮೆ ದರ್ಜೆಯಲ್ಲಿ ಕೆಳಗೆ ಕುಳಿತುಕೊಳ್ಳಲೇ ಎಂದು ತನ್ನ ಬಾಲವನ್ನೇ ಸುತ್ತಿ ಸಿಂಬೆಯಾಗಿಟ್ಟುಕೊಂಡು ಆ ಹನುಮಂತನು ಎತ್ತರವಾದ ಸ್ಥಳದಲ್ಲಿ ಕುಳಿತುಕೊಂಡಂತೆ '' ಈ ಉಪಮಂತ್ರಿಗಳು ಇತರ ಮಂತ್ರಿಗಳು ಮಾಡುತ್ತಿದ್ದ ಟಿ. ಎ. ಮತ್ತು ಡಿ. ಎ. ಗಳ ಬಗ್ಗೆ ಎಲ್ಲಾ ಮಂತ್ರಿಗಳದೂ ಒಂದೊಂದು ಪುಟವಿದ್ದರೆ ಇವರ ಟಿ. ಎ. ಮತ್ತು ಡಿ. ಎ. ಬಿಲ್‌ಗಳು 3–4 ಪುಟಗಳಿರುತ್ತಿತ್ತು. ಅಂಥ ಟೂರ್ ಪ್ರೋಗ್ರಾಂ ಈ ಮಂತ್ರಿಗಳದು ! ದೇಶದಲ್ಲಿ ನಡೆಯಬೇಕಾಗಿದ್ದ ಕೆಲಸಕಾರ್ಯಗಳೇನಿತ್ತು, ಅವುಗಳೊಂದೂ ಆಗದೆ ಇದ್ದರೂ ಈ ಉಪ-ಮಂತ್ರಿಗಳು ಮಾತ್ರ ತಿಂಗಳಿಗೆ 15 ಸಾವಿರ ರೂ. ಗಳ ಟಿ.ಎ. ಡಿ.ಎ. ತೆಗೆದುಕೊಳುತ್ತಿದ್ದಾರಲ್ಲ ಆ ಬಗ್ಗೆ ಹಣಕಾಸಿನ ಸಚಿವರು ಅದನ್ನು ರಿಜೆಕ್ಟ್ ಮಾಡದೆ ಸುಮ್ಮನೆ ಏಕೆ ಕಣ್ಣುಮುಚ್ಚಿಕೊಂಡು ಕುಳಿತಿದ್ದಾರು? ಈ ಅರ್ಥ ಸಚಿವರ ಸೆಕ್ರೆಟರಿಗಳು ತಮ್ಮ ಮಂತ್ರಿಗಳಿಗೆ ಏನು ಬುದ್ಧಿ ಹೇಳಿದ್ದಾರೆಂಬುದನ್ನು ಹೇಳುತ್ತೇವೆ. ಈ ಮಂತ್ರಿಮಂಡಲಕ್ಕೆ ಈ ಮಾನ್ಯ ಸಭೆಯ ಸದಸ್ಯರು ಹೇಳಿದುದಕ್ಕೆ ಗೌರವ ಕೊಡದಿದ್ದರೂ ಚಿಂತೆಯಿಲ್ಲ, ಈ ಅರ್ಥ ಸಚಿವರು ಅವರ ಸೆಕ್ರೆಟರಿಗಳು

ಕೇಳಿದುದಕ್ಕಾದರೂ ಗೌರವ ಕೊಟ್ಟಿದ್ದಾರೇನು? ಆ ಹಣಕಾಸಿನ ಶಾಖೆಯ ಸೆಕ್ರೆಟರಿಗಳು ಹೀಗೆ ಹೇಳಿದ್ದಾರೆ:

"It has been observed by the Chairman, Public Accounts Committee that many of the officers who were examined were not able to give full information about the Audit objections and other matters which find a place in the Reports..."

What happened to their efficiency, sincerity?

Why should they draw so much money from the treasurey? ಇದಕ್ಕಿಂತಲೂ ಅವರಿಗೆ ಬುದ್ಧಿ ಹೇಳತಕ್ಕವರು ಬೇಕೇನು? ಸರ್ಕಾರ ಇರುವುದು ಹಣವನ್ನು ಖರ್ಚುಮಾಡುವುದಕ್ಕೇನೆ. ಆದರೆ ಹಾಗೆ ಖರ್ಚುಮಾಡಿದ ಹಣದಿಂದ ದೇಶಕ್ಕೆ ಬಂದ ಪ್ರತಿಫಲವೇನು, ಜನರಿಗೆ ದೊರೆತ ಅನುಕೂಲಗಳೇನು ಎಂಬುದನ್ನು ಈ ಮಾನ್ಯ ಸಭೆಯಿಂದ ಚುನಾಯಿಸಲ್ಪಟ್ಟ ಆ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಅಧ್ಯಕ್ಷರು ಸರ್ಕಾರದಲ್ಲಿ ಆಡಳಿತ ಹೇಗೆ ನಡೆಯುತ್ತಿದೆ, ಅಧ್ಯಕ್ಷರಾದ ಅಧಿಕಾರಿಗಳ ಸಂಖ್ಯೆ ಸರ್ಕಾರಿ ಆಡಳಿತದಲ್ಲಿ ದಿನದಿನಕ್ಕೂ ಹೇಗೆ ಬೆಳೆದುಕೊಂಡು ಬರುತ್ತಿದೆ ಎಂಬುದನ್ನೆಲ್ಲಾ ಕೂಲಂಕಷವಾಗಿ ಈ ವರದಿಯಲ್ಲಿ ಸೂಚಿಸಿದ್ದಾರೆ. ಈ ವರದಿಯನ್ನು ಓದಿದಮೇಲೆ ನಮ್ಮ ಸರ್ಕಾರದ ಆಡಳಿತ ಹೇಗೆ ನಡೆಯುತ್ತಿದೆ ಎಂಬುದು ಚೆನ್ನಾಗಿ ವೇದ್ಯವಾಗುತ್ತದೆ. ಗಾಳೀ ಕಾಲದಲ್ಲಿ-ಆಷಾಡ ಮಾಸದಲ್ಲಿ ಹುಡುಗರು ಆಡರೇ ಗಾಳಿಪಟ-ನಿನಗೆ ಕಳ್ಳೆಪುರಿ ಕೊಡುತ್ತೇನೆ ಎಂತ ಹೇಳುತ್ತಾರಲ್ಲ ಹಾಗಿದೆ ನಮ್ಮ ರಾಜ್ಯಾಡಳಿತ! ಹೀಗೆ ನಮ್ಮಲ್ಲಿ ಕಾರ್ಪೋರೇಷನ್ ಗಳನ್ನು ಬೇರೆ ಮಾಡಲಾಯಿತು. ಅವುಗಳಿಗೆ ಹಣ ಹಾಕಿದ್ದೂ ಹಾಕಿದ್ದೆ. ಆದರೆ ಅವುಗಳಿಂದ ಬಂದ ಲಾಭವೇನೆಂದರೆ-ಕಾಸೂ ಕೂಡ ಇಲ್ಲ. ಹೀಗೆಲ್ಲ ಹಣ ಖರ್ಚುಮಾಡಲು ಅವರಿಗೆ ಅಧಿಕಾರವೆಲ್ಲತ್ತು!

ಶ್ರೀ ಟಿ. ಮರಿಯಪ್ಪ.—P.A.C. ವಿಚಾರಮಾಡಿ ವರದಿ ಬಂದ ತಕ್ಷಣವೇ ಸರ್ಕಾರದವರು ಈ ವಿಚಾರದಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಹೊರಟಿದ್ದಾರೆ. ಪೇಜು 51 ರಲ್ಲಿ ಉತ್ತರ ಕೊಟ್ಟಿದೆ.

Mr. SPEAKER.—Page 51. "The lapses on the part of the officers in future will be viewed seriously and the officers are requested not to give room for such a contingency".

Sri J. B. MALLARADHYA.—Was there a necessity to issue a circular at this belated hour?

"ಊರೆಲ್ಲ ಹಾಳಾದ ಮೇಲೆ ದಿಡ್ಡಿ ಬಾಗಿಲನ್ನು" ಹಾಕಿದಂತೆ ಇದೆ ನಮ್ಮ ಕೆಲಸಗಳೆಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇನ್ನಾದರೂ ಮುಂದಕ್ಕೆ ಇಂಥ ಲೋಪದೋಷಗಳಿಗೆ ಅವಕಾಶ ಕೊಡದಂತೆ ಹಣಕಾಸಿನ ವಿಚಾರದಲ್ಲಿ ಶ್ರೀ ಮರಿಯಪ್ಪನವರು ಒಂದು ಭದ್ರವಾದ ಕಳಹದಿ ಹಾಕಿಕೊಟ್ಟು......

ಶ್ರೀ ಎಂ. ಸಿ. ನರಸಿಂಹ.—ಇಂಥ ನುರಿತ ಖದೀಮರಿದ್ದಾಗಲೇ ಈ ಗತಿಯಾದರೆ ಮುಂದೆ ಕೇಳಬೇಕಾದ್ದೆ ಇಲ್ಲ!

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೋಗಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† Sri B. VAIKUKTA BALIGA.—I will not venture to reply on all the points because my esteemed colleagues will meet some of the points. I will refer to Page 4-para 7. "Autonomy for the Legislature Secretariat" and reference is there with regard to Article. 187 of the Constitution. And the observation is that 'separate Secretarial Staff' has been interpreted to mean separate from the Executive. "This provision in the Constitution was specifically put in order to secure independence to the Legislature which in the discharge of its duties has to function in an impartial and almost judicial manner."

(Sri B. Vaikunta Baliga)

Sir, to that extent that it should be impartial and almost judicial manner, there is absolutely no doubt. Sir the next sentence requires great scrutiny:

> "Dependence on the Executive would deprive the Legislature of a constitutional safeguard and under it subject to influences and it is precisely to prevent this, that the constitutional provision referred to above has been made. The Committee are surprised to find that, though it is eleven years since the Constitution came iuto force, action has not been taken to place the Legislature Secretariat on an independent footing as required by the Constitution and that it has even been made administratively subordinate to the Law Department."

Sir, my attention was drawn to the para at the bottom of Page 5 when I intervened and requested Mr. Patil to cite any instance where any department of the Secretariat had interfered in the affairs of the legislature. Sir, the reason that is given in the last paragraph is very small requirements of the members of the committee and I do not know whether it has really dealt with the relation between the law department and the legislature secretariat. Sir, before getting into further details, I will answer the only instance that was mentioned by Mr. Narasimhan and that was about the over-time allowance. He said that Government had not done anything in the matter. He referred to the half-an-hour debate on this subject.

Sri M. C. Narasimhan.— I never said that over-time allowance was not sanctioned.

Sri B. Vaikunta Baliga.—Sir, I had no intention of misquoting nor have I do e it. My friend will concede that he referred to the half-an-hour debate on this subject and said that no action had been taken. Sir, I refer him to Government Order of 29th November 1960. There is a G. O. enuntiating the principles where over-time allowance is going to be paid. I do not know what exactly is the point in debating on this point.

Sri M. C. Narasimhan.—My second point is not answered.

Mr. Speaker.—Let me make it clear. Government have, in fact, provided the funds. They have sanctioned funds for over-time allowance. The question between the Government and my Secretariat has been as to how this money should be disbursed. Rules are being framed and we are considering it. That is where the matter stands.

So far as the independece of the Secretariat is concerned I must make it clear that this is an all-India question and it is not confined to Mysore only. I must make it clear that the Parliamentary Secretariat is completely independent. The Jammu and Kashmir Legislature Secretariat is completely independent. In Punjab, they enjoy a

greater freedom than what we have and similarly. West Bengal also. But, there are other States where the independence is less than that of Mysore State. It has been resolved by the Presiding Officers that the Legislature Secretariats should be independent, as otherwise, they cannot act independently and impartially. I have also been fighting with the Government on this matter and I do not say that the Government are unsympathetic; they are sympathetic to a large extent. We are also evoling a procedure on the basis of which we should implement this in as full a measure as possible.

Secondly, so far as the grades of officers are concerned, in the comparable grade in the Secretariat and in the comparable grade in the Legislature Secretariat the pay scales and allowances are the same except in the case of the Secretary. I am also corresponding in this respect with the Law Minister, the Finance Minister and the Chief Minister and I have reason to believe that I will succeed in this matter.

Sri J. B. MALLARADHYA.—Sir, I want a clarification from the Law Minister. According to Article 187 (1) whether it is obligatory or option? It is a constitutional obligation cast on every Government whether they have taken action or not. In all other matters we take queue from the Lok Sabha. Have Government found out that the minimum salary of the Secretary in other States is Rs. 2,000?

Mr. SPEAKER.—Let me make the point still more clear. There is no exception to Article 187 (1); There can be no exception. It envisages independence of the Legislature Secretariat. But, we have our own background and against such that background, we have to get an independent Secretariat. This question was considered by the Presiding Officers.

We came to the conclusion that we must convince the Government so far as the Independence of the Legislature Secretariat is concerned. We must make our demand. We must not be in a hurry and we should be cautious. We will have it—if not to-day, to-morrow it will come.

As regards the relation between the Law Department and the Legislature Department, it is not my intention to say that there is anything wrong. The only thing that should be considered is whether the Legislature definitely should be subordinate to the Law Department. This again involves the independence of the Legislature Secretariat. We have to evolve and slowly and completely achieve our independence according to Article 187 in course of time.

Sri T. MARIAPPA.—In almost all matters, there is no interference.

Sri M. C. NARASIMHAN.—Over-time allowance business—you have still under correspondence. May I know as to whether the existing rules proposed somewhere in 1960 is different from what is prevailing in the case of the Finance Department Officials.

Mr. SPEAKER.—After all, I do not know so far as this is concerned. I have proposed that we should have our own set of rules, in respect of over-time allowance.

Sri B. VAIKUNTA BALIGA.—May I express my deep gratitude to you Sir, the Chair and also to the Members who have clarified the position in such a short time because the impression that was sought to be created was that for the last 11 years the Mysore Government has not done anything to evolve arrangements satisfactory to the Legislature Secretariat.

Sri J. B. MALLARADHYA.—The fact remains that to day the Legislature Secretariat has got to go through the humilition of being subordinate to the Law Department which we cannot understand as Members of the Legislature. That is the position which is unalterable. I do not know what you have done with it.

Sri B. VAIKUNTA BALIGA.—Sir, I never interfered with him when he was speaking. Sir, you have clarified the point that had arisen in the course of the debate. Am I wrong in expressing my gratitude to you? Who has said that the Secretariat to it? Obviously the Hon'ble Member does not know what we have been doing time and again and what steps are being taken from time to time to evolve and make it what it is to-day.

I shall be very brief, Sir. In terms of Article 187 (3), it is the Governor who has to frame rules:

> "(3) Until provision is made by the Legislature of the State under Clause (2), the Governor may, after consultation with the Speaker of the Legislative Assembly or the Chairman of the Legislative Council, as the case may be, make rules regulating the recruitment, and the conditions of service of persons appointed, to the Secretarial Staff of the Assembly or the Council, and any rules so made shall have effect subject to provisions of any law made under the said clause."

It is not done by the Government at all.

Sri J. B. MALLARADHYA.—What is the advice given to the Governor in this behalf. He is a constitutional Governor.

Sri B. VAIKUNTA BALIGA.—The provision is, until this is done by the Legislature, this is the provision, and rules have been framed and they are in force. They govern the most important thing, recruitment to the Legislature Secretariat. These rules are there before the House. Therefore, to say that nothing has been done by the Government. As you were pleased to observe Sir, time and again we are trying to evolve. I may also mention Sir, that this not pertaining to our State alone. As you were pleased to observe, the e is radical difference between the States and the Centre where there is ab olute independ nce. There is almost the same position in all other States. All States are progressing. So are we. We are not as we were in 1956; we are in 1960 where a number of things have been done.

Mr. SPEAKER.—I do also subscribe to the view that after I took the office, many more things have been done. We are progressing

towards independence of the legislature. But of course, Members may feel that it should be achieved now only. There is nothing wrong about it.

Sri B. VAIKUNTA BALIGA.—I never said that there is anything wrong, Sir.

Mr. SPEAKER.—Personally I am not in a hurry. I can convince the Government and get independence bit by bit.

Sri B. VAIKUNTA BALIGA.—I am grateful to the Speaker for the reason that in all matters, we have not differed.

Sri M. C. NARASIMHAN.—I want to know from you so far as the Public Accounts Committee recommendations are concerned, as to whether you differ from their recommendations?

Mr. SPEAKER.—I do not differ from the recommendations. I only say that we have to achieve it gradually.

Sri B. VAIKUNTA BALIGA.—May I also refer to some of the correspondence and steps through which we have gone and I would rather leave it at that, because you have clarified it. I only say that we were about to take steps; and we got a communication from the Chairman of the Council 'please do not change the Secretariat shape or pattern to that of Madras, because what is prevailing in 1957 in Mysore is a much better than what is prevailing in Madras.'

Mr. SPEAKER.—We are not in the lowest ebb, we are in the the middle.

Sri B. VAIKUNTA BALIGA.—I will therefore not get into greater details. Whatever suggestions that are made, I can assure you Sir, and also the House that all necessary steps will be taken as expeditiously as possible. You are aware that time was also fixed for a meeting between the Speaker, Chief Minister and myself. On account of pressure of work, we have not been able to meet. I can assure you Sir, so far as Legislature Secretariat is concerned,......

Sri B. D. JATTI.—We will meet very shortly.

Sri B. VAIKUNTA BALIGA.—I am grateful to Mr. Mallaradhya for trying to uphold the dignity of the House. But I am saying that I am yielding to none and I am more eager to maintain the prestige of the Houses of Legislature. In Mysore, we must lead other States.

Sri C. J. MUCKANNAPPA.—Sir, you have not said anything in regard to para 48 of the Report.

Sri B. VAIKUNTA BALIGA.—Sir, I am grateful and there is one fallacy which I will point out in Three Minutes and close my speech.

Reference is made to S.R.C. and provision is made in Section 120 that there should be adaptation of laws. We have done all that could possibly be done by way of adaptation. There is no single item in

(Sri B. VAIKUNTA BALIGA)

respect of which adaptation has not taken place. We must not confuse between adaptation of laws and Uniformity of laws. Adaptation will be only saying that the laws prevailing in a particular component will continue to prevail till uniformity is brought about. The two ideas should be kept separate. The adaptation has been done. The observation made is, they are required to review and see how far it is justified.

6-00 P.M.

With regard to uniformity, the House is aware and you are aware, that there are a number of Bills which have been drafted which could not be put through for want of time. So it is not that we are not at this work. I want to express my gratitute to the members of the House particularly the Opposition for having co-operated with us is passing a record number of Bills yesterday.

†ಶ್ರೀ ಹೆಚ್. ಕೆ. ವೀರಣ್ಣಗೌಡ (ಲೋಕೋಪಯೋಗಿ ಶಾಖಾ ಸಚಿವರು).—ಸ್ವಾಮೀ, ಕೆಲವು ಮಾನ್ಯ ಸದಸ್ಯರುಗಳು ಪಿ. ಡಬ್ಲ್ಯು. ಡಿ. ಇಲಾಖೆಯ ಸಂಬಂಧವಾಗಿ ಈ ಆಡಿಟ್ಟು ವರದಿಯಲ್ಲಿ ಹೇಳಿರತಕ್ಕ ಕೆಲವು ಅಂಶಗಳನ್ನು ಎತ್ತಿಕೊಂಡು ಬಹಳ ದೀರ್ಘವಾದ ಭಾಷಣವನ್ನು ಮಾಡಿದ್ದಾರೆ ಮತ್ತು ಸ್ವಲ್ಪ ಕಟುವಾದ ಭಾಷಣವನ್ನೂ ಮಾಡಿದ್ದಾರೆ. ಇದಕ್ಕೆ ಒಂದು ಕಾರಣ 1958–59ರ ಪರ್ಸೆಂಟೇಜನ್ನು ಪುನರ್ವಿಮರ್ಶೆ ಮಾಡದೇ ಅವರು ಹೇಳಿರತಕ್ಕದ್ದು. ಆದರೆ 1961ನೇ ಇಸವಿಯ 23ನೇ ದಿನಾಂಕದಲ್ಲಿ ಈ ಪರಿಸ್ಥಿತಿ ಇರಲಿಲ್ಲ ಎಂದು ಈ ಸಭೆಯಲ್ಲಿ ಅರಿಕೆ ಮಾಡಲು ಅಪೇಕ್ಷೆ ಪಡುತ್ತೇನೆ. ಆಡಿಟ್ಟು ಅಬ್‌ಜಕ್ಷನ್ನು ವಿಚಾರ ಹೇಳಿರುವ ವರ್ಷದಲ್ಲಿ ಹೆಚ್ಚು ಕೆಲಸಮಾಡಿ ಇಷ್ಟು ಅಬ್‌ಜಕ್ಷನ್ನುಗಳು ಬಂದಿರುವುದರಲ್ಲಿ ಶೇಕಡಾ 80 ರಷ್ಟು ಆಕ್ಷೇಪಣೆಗಳಿಗೆ ಸಮಜಾಯಿಷಿಯನ್ನು ಕೊಡಲಾಗಿದೆ. ಮತ್ತು ಈ ವರ್ಷದ ಸೆಪ್ಟಂಬರ್ ತಿಂಗಳಿನಲ್ಲಿ ಪಬ್ಲಿಕು ಅಕೌಂಟು ಕಮಿಟಿಯ ಮೀಟಿಂಗ್‌ನಲ್ಲಿ ಈ ವಿಚಾರವನ್ನು ಅವರ ಗಮನಕ್ಕೂ ಕೂಡ ತರಲಾಗಿದೆ ಮತ್ತು ಅವರೂ ಸಹ ಒಪ್ಪಿಕೊಂಡಿದ್ದಾರೆ. ಮತ್ತು ಇನ್ನುಳಿದ ಆಕ್ಷೇಪಣೆಗಳಿಗೆ ಕೂಡ ಅದರ ಬಗ್ಗೆ ತಕ್ಕ ಕ್ರಮವನ್ನು ಜಾಗ್ರತೆಯಾಗಿ ತೆಗೆದುಕೊಂಡು ಮುಗಿಸಲು ಪ್ರಯತ್ನ ಪಡುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಇದರಲ್ಲಿ ಎಸ್ಟಿಮೇಟುಗಳಿಲ್ಲದೆ, ಕೆಲಸವನ್ನು ತೆಗೆದುಕೊಂಡು ಮಾಡಿದರು ಎನ್ನುವ ಒಂದು ಆಕ್ಷೇಪಣೆಯನ್ನು ಮಾಡಿದರು. ಇವುಗಳಲ್ಲಿ ನೂರರಲ್ಲಿ 72 ಭಾಗದಷ್ಟು ಆಗಲೇ ಫೈಸಲಾಗಿವೆ. ಎಸ್ಟಿಮೇಟಿಗಿಂತ ಹೆಚ್ಚಿಗೆ ಖರ್ಚು ಮಾಡಿರುವುದು ಶೇಕಡಾ 40ರಷ್ಟು. ಇನ್ನು ಶೇಕಡಾ 52ರಷ್ಟು ಆಕ್ಷೇಪಣೆಗಳಿಗೆ ಸರಾಸರಿ ಹೇಳುವುದಾದರೆ ನೂರರಲ್ಲಿ 80ರಷ್ಟು ಭಾಗ ಆಕ್ಷೇಪಣೆಗಳಿಗೆ ಉತ್ತರವನ್ನು ಕೊಟ್ಟಿದೆ, ಇನ್ನುಳಿದ ಶೇಕಡಾ 20ರಷ್ಟು ಭಾಗದಷ್ಟು ಉತ್ತರಕ್ಕೆ ಸಮಜಾಯಿಷಿಯನ್ನು ಕೊಡುವುದಕ್ಕೆ ಪ್ರಯತ್ನಗಳು ನಡೆದಿವೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನೂರಕ್ಕೆ 80ರಷ್ಟು ಎಂದು ಹೇಳುವುದರ ವಿವರಗಳನ್ನು ಕೊಟ್ಟರೆ ತುಂಬಾ ಅನುಕೂಲವಾಗುತ್ತದೆ. ತಾವು ಕೊಟ್ಟಿರುವ ಅಂದಾಜಿನ ಪ್ರಕಾರ 13,2,24,137 ಎನ್ನುವ ಆಕ್ಷೇಪಣೆಗಳಿಗೆ 30ನೇ ಜೂನು 1961ರಲ್ಲಿ ಕೊಟ್ಟಿರುವ ವಿವರ ಏನು ಎನ್ನುವುದು ವಿವರ ಗೊತ್ತಾಗಲಿಲ್ಲ.

ಶ್ರೀ ಹೆಚ್. ಕೆ. ವೀರಣ್ಣಗೌಡ.—ನಾನು ಅವನ್ನೇ ಹೇಳಿಕೊಂಡು ಹೋಗಿದೆ. ಅಷ್ಟರಲ್ಲಿ ತಾವು ಕೇಳಿದಿರಿ ಅಷ್ಟೇ. ಪ್ಯಾರ 20ರಲ್ಲಿ ಹೇಳಿರುವ ಆಕ್ಷೇಪಣೆಗಳು ಎಂದರೆ 31ನೇ ಮಾರ್ಚ್

1950ರಲ್ಲಿ ಹೇಳಿದ್ದಕ್ಕೆ 16ನೇ ಅಕ್ಟೋಬರ್ 1961ಕ್ಕೆ ಸಮಜಾಯಿಷಿ ಕೊಡಲಾಗಿದೆ. ಎಸ್ಟಿಮೇಟು ಇಲ್ಲದೆ ಸುಮಾರು 21,810 ಐಟಂಗಳಿವೆ ಎಂದು ಹೇಳಿರುವುದರಲ್ಲಿ 15,700 ಐಟಂಗಳಿಗೆ ಸಮಜಾಯಿಷಿ ಕೊಟ್ಟಾಗಿದೆ. ಇದರ ಹಣ 10,86,16,451. ಅದರಲ್ಲಿಯೂ ಇದರಲ್ಲಿ ಉಳಿದಿರತಕ್ಕ 6,110 ಕೆಲಸಗಳೂ ಇವೆ. 38,65,180 ರೂಪಾಯಿಗಳಲ್ಲಿ ಎಸ್ಟಿಮೇಟಿ ಗಿಂತ ಜಾಸ್ತಿಯಾಗಿ ಹಣ ಖರ್ಚಾಗಿದೆ ಎನ್ನುವುದರಲ್ಲಿ, 4,270 ಕೆಲಸಗಳು ಮತ್ತು ಅದಕ್ಕೆ ಸಂಬಂಧಪಟ್ಟ ಹಣ 4,18,51,514, ಇದರ ಪೈಕಿ 1,682 ಕೆಲಸಗಳಿಗೆ ಸಮಜಾಯಿಷಿ ಕೊಡ ಲಾಗಿದೆ. ಇನ್ನು 1,62,88,510 ಎಂದು ಅಂದಾಜಾಗಿದ್ದುದ್ದರಲ್ಲಿ 1,588 ಕೆಲಸಗಳಿಗೆ ಉತ್ತರ ಕೊಡಲಾಗಿದೆ. ಇನ್ನು 2,49,69,004,ರೂಪಾಯಿಗಳ ಅಂದಾಜು ಇತ್ತು. ಮತ್ತೆ 4,222 ಕೇಸುಗಳಿಗೆ ಅಂದಾಜಾಗಿದ್ದುದು ಮತ್ತು ಅದಕ್ಕೆ ಸಂಬಂಧಪಟ್ಟ ಹಣ ಎಂದರೆ 5,61,99,104 ಮತ್ತು ಇದರಲ್ಲಿ 2,224 ಕೆಲಸಗಳಿಗೆ ಸಮಜಾಯಿಷಿಯನ್ನು ಕೊಟ್ಟಿದೆ, ಮತ್ತು ಇದಕ್ಕೆ ಸಂಬಂಧಪಟ್ಟ ಹಣ 4,11,315,874. ಇನ್ನು 956 ಕೇಸುಗಳಲ್ಲಿ, 1,60,08,520 ಮತ್ತು ಇದಕ್ಕೆ ಸಮಜಾಯಿಷಿ ಕೊಡಬೇಕಾಗಿದೆ. ಇದು ಆಗಿಂದಾಗ್ಗೆ ಎಸ್ಟಿಮೇಟುಗಳು ಬರುವುದಕ್ಕಾಗದೇ ಈ ತೊಂದರೆಯಾಗಿದೆ.

ಕೆಲಸ ಮಂಜೂರಾಗದೆ ಕೆಲಸ ಮಾಡಿದ್ದಾರೆಂದು ಪ್ಯಾರಾ 16ರ ಮೇಲೆ ಮಾತನಾಡುತ್ತಾ ಹೇಳಿದರು. ಅನೇಕ ಕೆಲಸಗಳು ಇಲಾಖೆಯಲ್ಲಿ ಮಂಜೂರಾಗದೇನೇ ಕೆಲಸವನ್ನು ಷುರು ಮಾಡಿದ್ದಾರೆ ಎಂದು ಹೇಳಿದರು. ಇದರಲ್ಲಿ ಒಂದು ಮಾತನ್ನು ನಾನು ಒಪ್ಪುತ್ತೇನೆ. ಹೀಗೆ ಆಗಿದೆ, ಆಗುತ್ತದೆ ಮತ್ತು ಮುಂದೆಯೂ ಆಗಬೇಕಾಗುತ್ತದೆ ಎನ್ನುವುದನ್ನು ನಾನು ತೀವ್ರವಾಗಿ ಹೇಳುತ್ತಿದ್ದೇನೆಂದು ಯಾರೂ ತಿಳಿದುಕೊಳ್ಳಬಾರದು. ಪ್ಲಾನು ಪಿರಿಯಡ್ಡಿನಲ್ಲಿ ಕೆಲಸಗಳು ಮುಗಿಯಬೇಕಾದರೆ, ಕೆಲವು ಸದಸ್ಯರು ಹೇಳಿದ ಹಾಗೆ ರೆಡ್‌ಟೇಪು ಎನ್ನುವುದು ಇದೆ ಎಂದು ಹೇಳುವಂತೆ ಫೈಲುಗಳು ಮೇಲಕ್ಕೆ, ಕೆಳಗೆ ಹೋಗುವುದರಿಂದ ಕೆಲಸಗಳು ನಿಧಾನ ವಾಗುತ್ತದೆ ಮತ್ತು ಪ್ಲಾನು ಪ್ರೋಗ್ರಾಂನಂತೆ ಕೆಲಸವನ್ನು ಮುಗಿಸುವುದಕ್ಕೆ ಆಗುವುದಿಲ್ಲ. ಹೀಗೆ ಕೆಲಸಗಳನ್ನು ಪೂರ್ತಿಯಾಗಿ ಮಾಡಲು ಮಂಜೂರಾತಿ ದೊರೆಯಬೇಕು ಎಂದು ಹೇಳುತ್ತಾ ಹೋದರೆ ಶೇಕಡಾ ಹತ್ತರಷ್ಟು ಕೆಲಸವನ್ನೂ ಕೂಡ ಮಾಡುವುದಕ್ಕೆ ಆಗುವುದಿಲ್ಲ. ಈಗ ತಮಗೆಲ್ಲಾ ತಿಳಿದಂತೆ ಪ್ರವಾಹದ ನೆರೆಯ ಹಾವಳಿಯಿಂದ ಎಷ್ಟೋ ಅನಾಹುತಗಳಾದವು. ಅವುಗಳಿಗೆ ರಿಲೀಫನ್ನು ಕೊಡುವುದಕ್ಕೆ ಒಂದಕ್ಕೂ ಮಂಜೂರಾತಿಯನ್ನು ಕೊಟ್ಟಿರಲಿಲ್ಲ. ಈಚೆಗೆ ಮಂಜೂರಾತಿಯನ್ನು ಕೊಡಲಾಯಿತು. ಇದಕ್ಕೆಲ್ಲಾ ಮಂತ್ರಿಗಳ ಹತ್ತಿರ ಬರಬೇಕಾಗಿಲ್ಲ. ಅಧಿಕಾರಿಗಳೇ ಕೆಲಸ ಮಾಡಿ ಆ ನಂತರ ಇಮೀಡಿಯಟ್ಟಾಗಿ ಮಂಜೂರಾತಿಯನ್ನೂ ಕೊಡು ತ್ತಾರೆ. ಈ ರೀತಿಯಾಗಿ ಮಾಡಬೇಕಾಗುತ್ತದೆ ಎನ್ನುವುದನ್ನು ಈ ಪಬ್ಲಿಕ್ ಅಕೌಂಟು ಸಮಿತಿಯವರೂ ಒಪ್ಪಿಕೊಂಡಿದ್ದಾರೆ. ಫೈನಾನ್‌ಷಿಯಲ್‌ಇಯರು ಮುಗಿಯುವುದರೊಳಗಾಗಿ ಮಂಜೂರಾತಿಯನ್ನು ಕೊಟ್ಟು ಅದರ ಪ್ರಕಾರ ಮಾಡಬೇಕಾಗುತ್ತದೆ. ಇದಕ್ಕೆ ಬೇಕಾದ ಮಂಜೂರಾತಿಯನ್ನು ಸರ್ಕಾರದವರು ಕೊಡಲು ಪ್ರಯತ್ನ ಮಾಡುತ್ತಾರೆ ಎಂದು ಈ ಸಭೆಯಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಬೆಟರುಮೆಂಟು ಲೆವಿ ಜಾರಿಗೆ ಕೊಡದೇ ಇದ್ದುದರಿಂದ ಸರ್ಕಾರಕ್ಕೆ ಬರತಕ್ಕ ಹಣ ಕಡಿಮೆಯಾಗಿದೆ ಎನ್ನುವ ಆಕ್ಷೇಪಣೆಯನ್ನು ಎತ್ತಿದ್ದಾರೆ. ಇದೇನೂ ಉತ್ಪ್ರೇಕ್ಷೆಯಲ್ಲ. ಬೆಟರುಮೆಂಟು ಲೆವಿ ಕಾನೂನು ಪಾಸಾದ ಮೇಲೆ ನಮ್ಮ ಹಣಕಾಸಿನ ಮಂತ್ರಿಗಳು ಹೇಳಿದ ಹಾಗೆ ಅದರಲ್ಲಿ ಲೀಗಲ್ ಡಿಫಿಕಲ್ಟಿಗಳು ಮತ್ತು ಕ್ಲಾರಿಫಿಕೇಷನ್ನುಗಳು ಬಂದುದರಿಂದ ಸ್ವಲ್ಪ ನಿಧಾನ ವಾಗಿ ಅದನ್ನು ಒಪ್ಪಿಕೊಂಡು ಈ ವರ್ಷ ಫೆಬ್ರವರಿ ತಿಂಗಳಿನಲ್ಲೇ ರೂಲ್ಸುಗಳನ್ನು ಸಹ ಪ್ರಕಟ ಮಾಡಲಾಗಿದೆ ಮತ್ತು 9ನೇ ಮೇ 1961ರಲ್ಲಿ ಜಾರಿಗೆ ಕೊಟ್ಟಿದ್ದೇವೆ. ಡಿಪಾರ್ಟುಮೆಂಟಿನ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇನ್ನೂ ಮುಂದಿನ ವರ್ಷ ಬರುವ ಏಪ್ರಿಲ್‌ನಲ್ಲಿ

(ಶ್ರೀ ಹೆಚ್. ಕೆ. ವೀರಣ್ಣಗೌಡ)

ಜಾರಿಗೆ ಬರುವುದರಿಂದ ಹಣವನ್ನು ವಸೂಲು ಮಾಡುವ ಕಾರ್ಯಕ್ರಮ ಚೆನ್ನಾಗಿ ನಡೆಯುತ್ತದೆ ಎನ್ನುವ ಭರವಸೆಯನ್ನು ಈ ಸಭೆಯಲ್ಲಿ ಹೇಳುತ್ತೇನೆ. ಮುಖ್ಯವಾಗಿ ಅವರು ಒಂದು ವಿಷಯ ಹೇಳಿದರು ಅದರಲ್ಲಿಯ ಲೋಪ ದೋಷಗಳನ್ನು ಸರಿಪಡಿಸಿಕೊಂಡು ಮುಂದಿನ ಹಣಕಾಸಿನ ವರ್ಷದಲ್ಲಿ ಅದು ಜಾರಿಗೆ ಬರುತ್ತದೆಂದು ನನಗೆ ಭರವಸೆಯಿದೆ ಎಂದು ತಮಗೆ ಹೇಳುತ್ತೇನೆ.

ಇನ್ನು ನೀರಾವರಿ ಕೆಲಸ ಕಾರ್ಯಗಳ ಬಗ್ಗೆ ಹೇಳಿದ್ದಾರೆ. Capital Account ವಿಚಾರದಲ್ಲಿ ವಿವರ ಅಕೌಂಟೆಂಟ್ ಜನರಲ್ ಅವರಿಗೆ ತಿಳಿಸಿದೆ. ಆದರೆ ಇನ್ನೂ ರೆವಿನ್ಯೂ ಅಕೌಂಟ್ಸ್ ಬರಬೇಕಾಗಿದೆ. ಈ ಬಗ್ಗೆ ಡಿವಿಜನಲ್ ಕಮಿಷನರ್ ಅವರಿಗೆ ತಿಳುವಳಿಕೆ ಕೊಟ್ಟಿದ್ದೇವೆ. ಸಾಧ್ಯವಾದಷ್ಟು ಬೇಗನೇ ತರಿಸಿಕೊಂಡು ಈ ವರ್ಷ ಮುಗಿಯುವದರೊಳಗಾಗಿ ವಿವರಗಳನ್ನು ಒದಗಿಸುತ್ತೇವೆ, ಸದಸ್ಯರು ಮಾಡಿದ ಟೀಕೆಗೆ ಉತ್ತರ ಕೊಟ್ಟು ಸಮಾಧಾನ ಕೊಟ್ಟಿದ್ದೇವೆ. ಸದಸ್ಯರು ಕೊಟ್ಟಿರುವ ಒಳ್ಳೇ ಸಲಹೆಗಳನ್ನು ಸರಕಾರ ಮನಸ್ಸಿನಲ್ಲಿಟ್ಟುಕೊಂಡು ಕಾರ್ಯಗತ ಮಾಡಲಾಗುವುದೆಂದು ಭರವಸೆ ಕೊಟ್ಟು ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎ. ಆರ್. ಪಂಚಗಾವಿ.—ವಾಟರ್ ರೇಟ್ಸ್ ಬಗ್ಗೆ ಏನು ಮಾಡಿದ್ದೀರಿ? ಅದನ್ನು ಯುನಿಫಾರ್ಮ ಆಗಿ ಮಾಡುತ್ತೀರಾ ಎಂಬುದು ಸ್ಪಷ್ಟವಾಗಲಿಲ್ಲ, ಅದನ್ನು ಹೇಳುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದನ್ನು ಮಾಡುತ್ತಾ ಇದ್ದೇವೆ.

† ಶ್ರೀ ಟಿ. ಮರಿಯಪ್ಪ (ಹಣಕಾಸಿನ ಮಂತ್ರಿಗಳು).—ಅಧ್ಯಕ್ಷರೇ, ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿಯ ಮೇಲೆ ಬಹು ಪ್ರಾಮುಖ್ಯವಾಗಿ ಚರ್ಚೆ ಮಾಡಿದಂಥ ಎರಡು ವಿಷಯಗಳ ಟೀಕೆಗೆ ಸಮಾಧಾನಕರವಾದ ಉತ್ತರ ಕೊಟ್ಟದ್ದಾಯಿತು. ಅದಕ್ಕೆ ಸಭಾಸದಸ್ಯರು ಸಮಾಧಾನ ಹೊಂದಿದ್ದಾರೆಂದು ಭಾವಿಸುತ್ತೇನೆ. ಅಷ್ಟು ಪ್ರಬಲವಾದಂಥ ಚರ್ಚೆಗೆ ಪ್ರತ್ಯುತ್ತರವಾಗಿ ಅಷ್ಟೇ ಸಮಾಧಾನಕರವಾದಂಥ ಉತ್ತರ ಕೊಟ್ಟಿದ್ದನ್ನು ಗಮನಿಸಿರಬಹುದು. ಈ ಮಧ್ಯೆ ಅಧ್ಯಕ್ಷರು ಸಹ ಲೆಜಿಸ್ಲೇಚರ್ ಇಲಾಖೆಯ ವಿಚಾರದಲ್ಲಿ ಸಹ ಕ್ಲಾರಿಫಿಕೇಷನ್ಸ್ ಕೊಟ್ಟರು ಅದನ್ನು ಮೊದಲೇ ತಿಳಿಸಿಬಿಟ್ಟಿದ್ದರೆ ಹೆಚ್ಚು ಸಹಾಯಕವಾಗುತ್ತಿತ್ತೋ ಏನೋ! ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ವರದಿಯಲ್ಲಿ ಮಾಡಿರತಕ್ಕಂಥ ಆಕ್ಷೇಪಣೆಗಳನ್ನು ಎತ್ತಿ ಬಹು ವಿಫುಲವಾಗಿ ಚರ್ಚೆಯಾಗಿದೆ. ಅದಕ್ಕೆ ಉತ್ತರ ಹೇಳುತ್ತೇನೆ.

ಸಾಮಾನ್ಯವಾಗಿ ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿಯ ಬಗ್ಗೆ ಯಾವ contravarsy ಇರಬಾರದು ಪಕ್ಷ ಪಂಗಡಗಳ ಭೇದ ಭಾವವಿಲ್ಲದೆ ಎಲ್ಲ ಸದಸ್ಯರೂ ಈ ಕಮಿಟಿಯ ವರದಿಯ ವಿಚಾರದಲ್ಲಿ ಸಹಕರಿಸಬೇಕಾಗುತ್ತದೆ ಮತ್ತು ಚರ್ಚೆ ಮಾಡಬೇಕಾಗುತ್ತದೆಂದು ಮೊದಲೆ ಮನವಿ ಮಾಡಿಕೊಳ್ಳುತ್ತೇನೆ. ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿ ಮೂಲಕ ಅನೇಕ ವಿಷಯಗಳು ಸರಕಾರದ ಗಮನಕ್ಕೆ ಬರುತ್ತವೆ ಅವುಗಳ ಬಗ್ಗೆ ಯಾವ ಯಾವ ಕಾಲಕ್ಕೆ ಏನೇನು ಕ್ರಮ ತೆಗೆದು ಕೊಳ್ಳಬೇಕೋ ಅದಕ್ಕೆ ಸಹಾಯಕವಾಗುವ ದೃಷ್ಟಿಯಿಂದ ಪರಿಶೀಲನೆ ಮಾಡಬೇಕೆಂದು ಒತ್ತಿ ಹೇಳಬೇಕಾಗಿದೆ. ಈ ದೃಷ್ಟಿಯಿಂದ ಪರಿಶೀಲನೆ ಮಾಡದೇ ವರದಿಯಲ್ಲಿ ನಮೂದಿಸಿದ ಅಂಶಗಳ ಮೇಲೆ ಬಜೆಟ್ ಚರ್ಚೆ ನಡೆಸುವ ರೀತಿಯಲ್ಲಿ ಟೀಕೆ ಮಾಡಿದರೆ ಅದು ಸಹಾಯಕವಾಗುವುದಿಲ್ಲ, ಯಾಕೆಂದರೆ ಪಬ್ಲಿಕ್ ಅಕೌಂಟ್ಸ್ ಕಮಿಟಿ ಎಸ್ಟಿಮೇಟ್ ಕಮಿಟಿ ವರದಿಗಳು ಸರಕಾರಕ್ಕೆ ಬಹಳ ಸಹಾಯಕವಾಗುವ ವರದಿಗಳಾಗಿರುತ್ತವೆ. ಇವು watch dogs ಇದ್ದ ಹಾಗೆ ಎಂದು ಹೇಳಬಹುದು ಅನೇಕ ಸಲಹೆಗಳನ್ನು ಬಹಳ ಸಹಾನುಭೂತಿಯಿಂದ ಸರಕಾರ ಪರಿಶೀಲನೆ ಮಾಡುತ್ತದೆ. ನ್ಯೂನತೆಗಳನ್ನು ಕೂಡ ಸರಿಪಡಿಸತಕ್ಕ ಕ್ರಮ ತೆಗೆದುಕೊಂಡಿದ್ದೇವೆ. ಅದಕ್ಕೆ ಈ ವರದಿಯೇ ಸಾಕ್ಷಿಯಾಗಿದೆ, ಪರಿಶೀಲನೆ ಮಾಡುವುದಕ್ಕೆ ಸದಸ್ಯರಿಗೆ ಒಂದು ಮಾತು ಹೇಳುತ್ತೇನೆ. ಸೂಕ್ತ

ವಾದ ಟೀಕೆ ಸಹಾಯಕವಾಗುವ ರೀತಿಯಲ್ಲಿ ಮಾಡಿದರೆ ಬೇಡ ಎಂದು ಎನ್ನುವದಕ್ಕಾಗುವುದಿಲ್ಲ ಎಂಬ ಭರವಸೆ ವಿಶ್ವಾಸ ನಮಗಿದೆ, ಆದರೆ ಅದನ್ನು ಯಾವ ರೀತಿ ಬೇಕೋ ಆ ರೀತಿ ಉಪಯೋಗಿಸಬಹುದು.

ಈ ವರದಿಯಲ್ಲಿ ನಾನಾ ವಿಷಯಗಳನ್ನು ಎತ್ತಿ ತೋರಿಸಿದ್ದಾರೆ, ಅದಕ್ಕೆ ನಾವು ಆಕ್ಷೇಪಣೆ ಮಾಡುವುದಿಲ್ಲ, ಸರಕಾರದ ವಿಚಾರದಲ್ಲಿ ಮಾಡಿರತಕ್ಕಂಥ ಸಲಹೆಗಳಿಗೆ ಸರಕಾರದ ಪತಿಯಿಂದ ಯಾವ ಆಕ್ಷೇಪಣೆಯಿಲ್ಲ ಎಂದು ವಿನಯದಿಂದ ಹೇಳುತ್ತೇನೆ. ಶ್ರೀ ಮಲ್ಲಾರಾಧ್ಯರವರು ಭಾಷಣದಲ್ಲಿ ಉಪಯೋಗಿಸಿದ ಭಾಷೆಯನ್ನು avoid ಮಾಡಬಹುದಾಗಿತ್ತು ಎಂದು ಇಷ್ಟು ಹೇಳಿದರೆ ಸಾಕು. ಅಳತೆ ಮೀರಿ ಟೀಕೆ ಮಾಡಬೇಕಾಗಿಲ್ಲ, ಹಾಗೆ ಮಾಡದೇ ಇದ್ದರೆ ಚೆನ್ನಾಗಿತ್ತು.

ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿಯನ್ನು ಪರಿಶೀಲನೆ ಮಾಡುವಾಗ್ಗೆ ಇದರಲ್ಲಿ ಎರಡು ಭಾಗ ಮಾಡಿ ಇಟ್ಟುಕೊಳ್ಳಬಹುದು, ಮೊದಲನೇಯದಾಗಿ ಆಡಿಟ್ objections ಏನೇನು ಇವೆ ಎಂಬುದನ್ನು ಪರಿಶೀಲನೆ ಮಾಡಬೇಕು, ಎರಡನೆಯದಾಗಿ ಅವುಗಳಿಗೆ ಇಲಾಖೆಯ ಅಧಿಕಾರಿಗಳು ಸಮಜಾಯಿಷಿ ಕೊಟ್ಟಿರತಕ್ಕಂಥಾದ್ದನ್ನು ನೋಡಬೇಕು, ಅದು ಸಮಾಧಾನಕರವಾಗಿ ಆಗದೇ ಹೋದರೆ ಅದನ್ನು ಹೇಳುವುದಕ್ಕೆ ಒಂದು ಅವಕಾಶವಿರುತ್ತದೆ. ಇವುಗಳನ್ನು ಮೀರಿ ಏನಾದರೂ ನ್ಯೂನ್ಯತೆಗಳನ್ನು ಎಲ್ಲಿಯಾದರೂ ಇದ್ದರೆ ಅದನ್ನು ಸರಕಾರದ ಗಮನಕ್ಕೆ ತಂದು ತಕ್ಕ ಕ್ರಮ ತೆಗೆದುಕೊಳ್ಳಬೇಕು, instructions issue ಮಾಡಬೇಕು ಎನ್ನತಕ್ಕ ರೀತಿಯಲ್ಲಿ ಸಹಾಯ ಮಾಡಬೇಕಾದುದು ಸದಸ್ಯರು ಮಾಡಬೇಕಾದ ಕೆಲಸ. ಅದಕ್ಕೂ ಮೀರಿ ನ್ಯೂನತೆಗಳು ಕಂಡು ಬಂದರೆ ಸಭಾ ಸದಸ್ಯರು ಟೀಕೆ ಮಾಡುವುದು ನ್ಯಾಯವಾಗುತ್ತದೆ, observations ಈ ರೀತಿ ಪರಿಣಮಿಸದೇ ಹೋದರೆ ಅದು ಸಾಧು ಅಲ್ಲ ಎಂದು ವಿನಯದಿಂದ ಹೇಳುತ್ತೇನೆ.

ಉದಾಹರಣೆಗೆ ಎರಡು ಮೂರು ಅಂಶಗಳನ್ನು ಅಷ್ಟೇ ಹೇಳುತ್ತೇನೆ. ಈಗಾಗಲೇ ಕೆಲವು ಅಂಶಗಳಿಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಪ್ರಬಲ ಆಕ್ಷೇಪಣೆ ಯಾವುದೂ ಉಳಿದಿಲ್ಲ. ಒಂದೇ ಒಂದು ಅಂಶ ಮಾತ್ರ ನಾನು ಹೇಳುತ್ತೇನೆ. ಕಮೀಟಿಯವರಿಗೂ ಸರಕಾರಕ್ಕೂ difference of opinion ಇರುವ ಒಂದು ಉದಾಹರಣೆ ಪ್ಯಾರ 12, ಪೇಜ್ 7ರಲ್ಲಿ ಹೇಳಿದೆ, ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಅಧಿಕಾರಿಗಳನ್ನು ಫೋರ್ಸ್ ಮಾಡಿದರೂ ಹೋಗಲಲ್ಲ ತಕ್ಕ ಕ್ರಮ ತೆಗದುಕೊಳ್ಳಬೇಕೆಂದು ಹೇಳಿದೆ. ಇದನ್ನು ಎರಡು ದೃಷ್ಟಿಯಿಂದ ನೋಡಬೇಕಾಗುತ್ತದೆ, ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡಿದ್ದನ್ನು ಮಹತ್ತರವಾಗಿ ಪರಿಗಣಿಸಿ ಟೀಕೆ ಮಾಡಿದರು. ಇದಕ್ಕೆ ಅನೇಕ ಕಾರಣಗಳು ಇರುತ್ತವೆ. ಅಲ್ಲಿಯ ಹವೆಯು ಚೆನ್ನಾಗಿಲ್ಲ, ಆರೋಗ್ಯ ಕೆಟ್ಟು ಹೋಗುತ್ತದೆ, ಅಲ್ಲಿಗೆ ಹೋಗಲು ಅನೇಕರು ಒಪ್ಪುವುದಿಲ್ಲ, ಇದಲ್ಲದೆ ಇನ್ನೂ ಅನೇಕ ಕಾರಣಗಳು ಇರುತ್ತವೆ. ಪ್ರಜಾಪ್ರಭುತ್ವದಲ್ಲಿ ಸರಕಾರ ಡಿಕ್ಟೇಟರ್‌ಷಿಪ್‌ನಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ, ಅಧಿಕಾರಿಗಳನ್ನು ಫೋರ್ಸ್ ಮಾಡಿದರೂ ಅವರಿಗೆ ಹೋಗುವುದಕ್ಕಾಗುವುದಿಲ್ಲ, ಇಂಥ ನಿದರ್ಶನಗಳು ಗಮನಕ್ಕೆ ಬಂದಿವೆ. ಇದು ಸರ್ವೇ ಸಾಮಾನ್ಯವಾಗಿದೆ, ಇದನ್ನು ಕೆಲವು ಸದಸ್ಯರು ದೊಡ್ಡದಾಗಿ ಉಪಯೋಗಿಸಿಕೊಂಡು ಕಾಂಗ್ರೆಸ್ಸಿನ ಸಂಸ್ಥೆಯ ಮೇಲೆ ಟೀಕೆ ಮಾಡಿದ್ದು ಸಮಂಜಸವಲ್ಲ, ಸಾಧುವಲ್ಲ, ಅಷ್ಟು ಉತ್ಪ್ರೇಕ್ಷೆ ಮಾಡಿ ಟೀಕೆ ಮಾಡತಕ್ಕಂಥಾದ್ದು ಒಳ್ಳೆಯದಲ್ಲ, ಇದರಲ್ಲಿ ಕಷ್ಟವಿದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ, ಒಬ್ಬ ಅಧಿಕಾರಿಯನ್ನು ಟ್ರಾನ್ಸ್‌ಫರ್ ಮಾಡಿದಾಗ್ಗೆ ಮನೆಯಲ್ಲಿ ಹೆರಿಗೆಯ ಸಮಯವಿರುತ್ತದೆ, ಇನ್ನೊಬ್ಬರಿಗೆ ಕಾಯಿಲೆಯಾಗಿರುತ್ತದೆ, ಇಂಥ ಸಮಯದಲ್ಲಿ ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡಬೇಕಾಗುತ್ತದೆ. ಕೆಲವು ಕಡೆ insist ಸಹ ಮಾಡಿದ್ದೇವೆ. ಆದ್ದರಿಂದ ಇದನ್ನು ಇಷ್ಟು ದೊಡ್ಡದಾಗಿ ಮಾಡಬಾರದು.

ಇನ್ನು ಪ್ಯಾರ 13ರಲ್ಲಿ ಹೇಳಿರತಕ್ಕ ವಿಚಾರದಲ್ಲಿ ನಾನಿಷ್ಟೆ ಹೇಳುತ್ತೇನೆ. ಅಕೌಂಟೆಂಟ್ ಜನರಲ್‌ರವರು ಮೀಟಿಂಗಿಗೆ ಇಲಾಖೆ ಮುಖ್ಯಸ್ಥರನ್ನೂ—ಸೆಕ್ರೆಟರಿಗಳನ್ನೂ ಸಹ ಕರೆಸಿದಾಗೂ,

(ಶ್ರೀ ಟಿ. ಮರಿಯಪ್ಪ)

ಬಾರದಿರುವುದು ತಪ್ಪು. ಆ ಬಗ್ಗೆ ನಾನಾಗಲೇ ಆರೀತಿ ಮಾಡಬಾರದೆಂದು ಆರ್ಡರ್ ಮಾಡಿದ್ದೇನೆ. ಆದರೆ 13ನೇ ಪ್ಯಾರಾದಲ್ಲಿ ಮೇಲೆ ಹೇಳಿರತಕ್ಕದ್ದನ್ನಷ್ಟೇ ಸದಸ್ಯರು ಓದಿದರೆವಿನಾ ಕೆಳಗೆ ಅದೇ ಪ್ಯಾರಾದಲ್ಲಿ ಏನು ಹೇಳಿದೆ ಎಂಬುದನ್ನು ಓದಲಿಲ್ಲ. ಅದನ್ನು ಓದಿದ್ದರೆ ಹೆಚ್ಚು ಟೀಕೆಗಳಿಗೆ ಅವಕಾಶವಾಗುತ್ತಿರಲಿಲ್ಲವೆಂಬುದು ನನ್ನ ವಾದ.

ಇನ್ನು ಪ್ಯಾರಾ 14 ರಲ್ಲಿ ಡಿವಿಜನಲ್ ಅಕೌಂಟೆಂಟ್‌ಗಳ ಕೆಲಸವನ್ನು ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಇವರಿಗೆ ವರ್ಗಾಯಿಸಬೇಕೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಈಗಾಗಲೇ ಕೆಲವು ಕ್ರಮಗಳನ್ನು ಕೈಗೊಂಡಿದ್ದಾರೆ. ಆ ಬದಲಾವಣೆಯಲ್ಲಿ ಕೆಲಸ ಕಾರ್ಯಗಳು ಹೇಗೆ ನಡೆಯುತ್ತವೆಂಬುದನ್ನು ವಾಚ್ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಡಿಲೆ ಆಗಬಾರದೆಂಬುದನ್ನು ನಾನೂ ಸಹ ಒಪ್ಪುತ್ತೇನೆ. ಕಾಲಕಾಲಕ್ಕೆ ಸರಿಯಾಗಿ ಈ ಲೆಕ್ಕಪತ್ರಗಳೆಲ್ಲ ಆಡಿಟ್ ಆಗಲೇಬೇಕು. ಆದ್ದರಿಂದ ಈಗ ಕಮಿಟಿಯವರು ಕೊಟ್ಟಿರತಕ್ಕ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಇನ್ನು ಪ್ಯಾರಾ 17ರಲ್ಲಿ ಕಂಟಿನ್‌ಜೆನ್ಸಿ ಬಿಲ್‌ಗಳ ವಿಚಾರ ಹೇಳಿದೆ. ಹೀಗೆ ಈ ಹೆಡ್ಡಿನಲ್ಲಿ ಹಣ ಡ್ರಾ ಮಾಡುತ್ತಿರುವುದು ಈ ಒಂದು ವರ್ಷದಲ್ಲೇನೂ ಅಲ್ಲ. ಇದು ಮಾಮೂಲಾಗಿ ನಡೆದುಕೊಂಡು ಬರುತ್ತಿದೆ. ಆದಾಗ್ಯೂ ಇದನ್ನು ಸಾಧ್ಯವಾದಮಟ್ಟಿಗೂ ತಡೆಗಟ್ಟಲು ಸರ್ಕಾರದವರು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಹಾಗಿದ್ದರೂ ಸರ್ಕಾರದವರೇನೂ ಮಾಡಿಲ್ಲವೆಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ಸಿ. ನರಸಿಂಹನ್.—ಏನೇನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಟಿ. ಮರಿಯಪ್ಪ.— ಈ ಸಭೆಯ ಮುಂದೆ ತಂದು ಅಂಥಾದ್ದಕ್ಕೆಲ್ಲ ವ್ಯಾಲಿಡೇಷನ್ ಪಡೆಯಲಾಗಿದೆ.

ಇನ್ನು ಪ್ಯಾರಾ 30ರಲ್ಲಿ ಹೇಳಿರುವ ವಿಚಾರದಲ್ಲಿ ಅಂದರೆ ಈ ಮೋಟಾರ್ ವೆಹಿಕಲ್ಸ್ ಟ್ಯಾಕ್ಸೇಷನ್ ಇಲಾಖೆಯಲ್ಲಿ ಆಗಿರತಕ್ಕ ಡಿಫಾಲ್ಕೇಷನ್ ವಿಚಾರದಲ್ಲಿ ಈಗಾಗಲೆ ನಾವು ಒಬ್ಬ ಪಬ್ಲಿಕ್ ಪ್ರಾಸಿಕ್ಯೂಟರನ್ನು ಅಪಾಯಿಂಟ್ ಮಾಡಿದ್ದೇವೆ. ವಿಚಾರಣೆ ಪೂರ್ತಿಯಾಗಿದೆ. ಹೈಕೋರ್ಟಿನೊಂದಿಗೆ ಪತ್ರವ್ಯವಹಾರ ನಡೆಸುತ್ತಿದ್ದೇವೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಈ ಪ್ಯಾರಾದ ಕೊನೆ ವಾಕ್ಯಕ್ಕೆ ಮಂತ್ರಿಗಳು ಕೊಡತಕ್ಕ ಸಮಾಧಾನವೇನು ? ಇದರ ಬಗ್ಗೆ ಏನಾದರೊಂದು ಟೈಂ ಲಿಮಿಟ್ ಫಿಕ್ಸ್ ಮಾಡಿದ್ದೀರಾ ? ಈಗಾಗಿರುವ ಅವ್ಯವಸ್ಥೆಗಳು ಇಂತಿಷ್ಟೇ ದಿನದಲ್ಲಿ ಸರಿಪಡಿಸಬೇಕು ಎಂಬ ಸೂಕ್ತ ಭರವಸೆಯನ್ನು ಈ ಸಭೆಗೆ ನೀಡಲು ನೀವು ನಿಮ್ಮ ಅಧಿಕಾರಿಗಳಿಗೆ ಏನು ಸೂಚನೆ ಕೊಟ್ಟಿದ್ದೀರಾ ?

ಶ್ರೀ ವೈ. ವೀರಪ್ಪ.—ಎನ್‌ಕ್ವೈರಿ ಕಂಪ್ಲೀಟ್ ಆಗಿದ್ದರೆ 'A' report ಕೊಡಲಾಗಿದೆಯೇ?

ಶ್ರೀ ಟಿ. ಮರಿಯಪ್ಪ.—ಇನ್ನು ಪ್ಯಾರಾ 39 ರಲ್ಲಿ ಸರ್ಕಾರಿ ಕಮರ್ಷಿಯಲ್ ಕನ್ಸರನ್ಸ್ ವಿಚಾರದಲ್ಲಿ ಪ್ರೋ ಫಾರ್ಮ ಅಕೌಂಟ್ಸ್‌ಗಳ ವಿಚಾರವನ್ನು ಪ್ರಸ್ತಾಪಿಸಲಾಗಿದೆ. ಇತ್ತೀಚೆಗೆ ನಾವು ಈ ಪ್ರೋ ಫಾರ್ಮ ಅಕೌಂಟ್ಸ್ ಮತ್ತು ಲಾಭ—ನಷ್ಟಗಳ ತಃಖ್ತೆಯನ್ನು ಪ್ರತಿ ವರ್ಷವೂ ಸಬ್‌ಮಿಟ್ ಬೇಕೆಂದು ಹೇಳಿದ್ದೇವೆ.

ಹೀಗೆ ಸ್ಟೋರ್ಸ್ ಪರ್ಚೇಸ್ ಕಮಿಟಿ ವಿಚಾರದಲ್ಲೂ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಈ ಬಗ್ಗೆ ಸರ್ಕಾರದವರು ಸಾಕಷ್ಟು ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಾರೆಂದು ತಿಳಿಸಲಿಚ್ಛಿಸುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ವಿರೋಧ ಪಕ್ಷದವರು ರಚನಾತ್ಮಕ ಸಲಹೆಯನ್ನು ಮಾಡುತ್ತಿಲ್ಲ ಎಂತ ಸರ್ಕಾರದವರು ಹೇಳುತ್ತಿದ್ದುದರಲ್ಲೇನಾದರೂ ತಿಳಿದಿದೆಯೇ? ತಾವು ಹೀಗೆಲ್ಲ ತೇಲಿಸಿ ಉತ್ತರ ಹೇಳಿಬಿಟ್ಟರೆ ನಾವೇನು ಮಾಡೋಣ ?

6-30 P.M.

Sri T. MARIAPPA.—It was discussed once on the floor of this House.

Sri. J. B. MALLARADHYA.—If you do that all this would never happen. You must have seen that the latest report according to Krishna Menon's Committee, the Parliament have accepted this suggestion.

ಶ್ರೀ ಟಿ. ಮರಿಯಪ್ಪ.—ನಾವು ಹೇಗೆ discretion ಮಾಡಬೇಕು? ಕಾರ್ಪೊರೇಷನ್ ಮೂಲಕ ಮ್ಯಾನೇಜ್ ಮಾಡತಕ್ಕವು ಮತ್ತು ಸರ್ಕಾರದ ಇಲಾಖೆಗಳಿಂದ ನಡೆಸತಕ್ಕವು ಎರಡು ರೀತಿ ಇದೆ. ಸರ್ಕಾರದ ಇಲಾಖೆಗಳ ಅಧೀನದಲ್ಲಿರುವ ಸಂಸ್ಥೆಗಳ ವಿಷಯದಲ್ಲಿ ಮಾತನಾಡಲು ಬಡ್ಜೆಟ್‌ಗೆ ಒಪ್ಪಿಗೆ ನೀಡುವಾಗ ಬೇಕಾದಷ್ಟು ಅವಕಾಶವಿದೆ. ಅವುಗಳ ಬಗ್ಗೆ ಟೀಕೆ ಮಾಡಬಹುದು. ಪ್ರತಿಯೊಂದು ವಿಷಯವನ್ನು ಪರಿಶೀಲಿಸಲು ಪೂರ್ಣ ಅವಕಾಶವಿದೆ. Incorporated Companies manage ಮಾಡುವ ಸಂಸ್ಥೆಗಳ ಸಂಬಂಧದಲ್ಲಿ ವಿಧಾನ ಮಂಡಲಗಳ ಮುಂದೆ ರಿಪೋರ್ಟನ್ನು ಇಡುವುದು ಸಾಧುವಾಗಿ ಕಾಣುತ್ತದೆ. ಸರ್ಕಾರದ ಇಲಾಖೆಯಿಂದ ನಡೆಸತಕ್ಕ ಸಂಸ್ಥೆಗಳಿಗೂ ಪುನಃ ಕಮಿಟಿ ಮಾಡುವುದೆಂದರೆ ತಲೆ ಶಿರೋಭಾರವಾಗುತ್ತದೆನ್ನುವುದನ್ನೂ ಯೋಚನೆ ಮಾಡಬೇಕು. ಈ ಸಂಸ್ಥೆಗಳ ಸಂಬಂಧದಲ್ಲಿ ಬಡ್ಜೆಟ್ಟನ್ನು ತಮ್ಮ ಮುಂದೆ ಮಂಡಿಸಿದಾಗ ಪ್ರತಿಯೊಂದರ ಸಾಧಕ ಬಾಧಕಗಳನ್ನೂ ವಿಚಾರ ಮಾಡುತ್ತೀರಿ. ಇದಲ್ಲದೆ board of management ನಲ್ಲಿ ಖಾಸಗಿ ಜನರಿರುತ್ತಾರೆ. ಈ ಸಂದರ್ಭದಲ್ಲಿ ಪ್ರತ್ಯೇಕ ಕಮಿಟಿಗಳು ಬೇಕೇ ಇಲ್ಲವೇ ಎನ್ನುವುದನ್ನು ಸರ್ಕಾರ ವಿಚಾರ ಮಾಡಬೇಕು. In relation to the industrial concerns run by Government agency and run by Corporations ನಾವು ಪುನಃ ಆಲೋಚನೆ ಮಾಡುವುದಕ್ಕೆ ಅಡ್ಡಿ ಇಲ್ಲ. ಸಾಧಕ ಬಾಧಕಗಳೆರಡನ್ನೂ ನೋಡಬೇಕಾಗುತ್ತದೆ.

Sri F. X. DENIS PINTO.—In Mysore there is already a Board of Management consisting of M.L.As.

Sri J. B. MALLARADHYA.—I am making a fundamental difference between a Committee consisting of Legislators and a Committee set up by the Board of Management.

Sri T. MARIAPPA.—Whether we can have a Committee for the Department concerned is a point to be considered. We must make distinction between the two is Industrial concerns run by Corporations and Industrial concerns run by Departmental heads.

ಸ್ಟೋರ್ಸ್ ಪರ್ಚೇಸ್ ಕಮಿಟಿಯ ವಿಚಾರದಲ್ಲಿ ಒಂದು ಟೆಂಡರ್‌ನಲ್ಲಿ ಆಗಿರುವ irregularity raise ಮಾಡಿದ್ದಾರೆ. ಅದಕ್ಕೆ ಸಾಕಾದಷ್ಟು ಸಮಾಧಾನವನ್ನು ಚೇರ್‌ಮನ್ ಕೊಟ್ಟಿದ್ದಾರೆ, ಸಮಾಧಾನವನ್ನು ಒಪ್ಪಿಕೊಂಡಿಲ್ಲ. ಅದರ ವಿಚಾರವಾಗಿ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ವಿಚಾರ ಮಾಡುತ್ತಿದ್ದೇವೆ.

ಶ್ರೀ ಎಂ. ಸಿ ನರಸಿಂಹನ್.—ಸಮಾಧಾನವನ್ನು ಒಪ್ಪಿಕೊಂಡಿಲ್ಲ. ಸಮಿತಿಯವರು "The Department tried to shift the ground by giving altogether a different explanation" ಎಂದು ಹೇಳಿದ್ದಾರೆ. Shifting ground ಇದು ಸಮಾಧಾನವೇ?

ಶ್ರೀ ಟಿ. ಮರಿಯಪ್ಪ.—ಅದೇ ಸಮಾಧಾನ. We will have it examined afresh. Defalcations ವಿಚಾರ ಕೂಡ ಮಾತನಾಡಿದ್ದಾರೆ. ಅವರಿಗೆ ಇಷ್ಟು ಹೇಳಬಹುದು. ಸರ್ಕಾರದ ಗಮನಕ್ಕೆ ಬಂದಿರುವ defalcations ಮತ್ತು misappropriations ಬಗ್ಗೆ ಸರ್ಕಾರದವರು ಕಠಿಣವಾಗಿ ವರ್ತಿಸಿದ್ದಾರೆ ಮತ್ತು ಅನೇಕ ಕೇಸುಗಳನ್ನು ಹಿಂದಕ್ಕೆ ತೆಗೆದುಕೊಂಡಿಲ್ಲ.

(ಶ್ರೀ ಟಿ. ಮರಿಯಪ್ಪ)

ಯಾವಯಾವ ಕೇಸುಗಳಲ್ಲಿ District Magistrate and Law Department ನವರು on legal or technical grounds concur ಆಗಿರುತ್ತಾರೆಯೋ ಅಂಥ ಕಡೆಗಳಲ್ಲಿ ಬಿಟ್ಟು, ಬಾಕಿ ಕಡೆಗಳಲ್ಲಿ ನಿಷ್ಠೂರವಾಗಿ strict ಆಗಿ ವರ್ತಿಸಿದ್ದಾರೆ. ಎಲ್ಲೋ isolated cases ತೆಗೆದು ಕೊಂಡು generalise ಮಾಡಬಾರದೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

44ನೇ ಪ್ಯಾರಾದಲ್ಲಿ ಕಮ್ಯುನಿಟಿ ಡೆವಲಪ್‌ಮೆಂಟ್ ವಿಚಾರಕೂಡ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ local development works ವಿಚಾರ ಮಾನ್ಯ ಸದಸ್ಯರಿಗೆಲ್ಲ ಗೊತ್ತಿರುತ್ತದೆ. ಅರ್ಜೆಂಟ್ ಗೋಸ್ಕರ ಅಭಾವ ಪರಿಸ್ಥಿತಿಯೊದಗಿದಾಗ ಖರ್ಚು ಮಾಡಲು ಅವರಿಗೆ ಹಣ ಕೊಟ್ಟಿದ್ದೇವೆ. ಈ ಸಲವೂ ಕೂಡ ಈ ಸಭೆಯವರ ಅಪ್ಪಣೆ ಮೇರೆಗೆ flood relief ಸಂಬಂಧದಲ್ಲಿ ಜನರಿಗೆ ಹಂಚಲು ತಕ್ಷಣ ಅಡ್ವಾನ್ಸ್ ಕೊಟ್ಟು ಕಳಿಸಿದ್ದೇವೆ. ಪ್ರಾಯಶಃ ಹಿಂದೆಯೂ ಇದೇ ತರಹ ಸಂದರ್ಭವಿದ್ದಿರ ಬಹುದು ಎಂದು ನಾನು ತಮಗೆ ತಿಳಿಸುತ್ತೇನೆ.

Sri J. B. MALLARADHYA.—B.D.Os are making payments in a haphazard manner ಎಂದು ಹೇಳಿದ್ದಾರೆ. ತಾವು ಹೇಳುವುದು ಇದಕ್ಕೆ ಅನ್ವಯಿಸುವುದಿಲ್ಲ.

Sri T. MARIAPPA.—So far as local development works are concerned after all, when works are taken on emergency basis money has to be advanced.

Sri M. C. NARASIMHAN.—"The Committee, therefore, desire that the overall position should be reviewed by Government and it should be required of the B.D.Os. to conduct periodical inspection of the several works-say once in 3 or 6 months as is feasible, so as to ensure that the public funds are properly utilized and that the progress of works is strictly according to the approved schedule." ಎಂದು ಹೇಳಿದ್ದಾರೆ. ತಾವು ಹೇಳುವುದಕ್ಕೂ ಇದಕ್ಕೂ ಸಂಬಂಧವಿಲ್ಲ.

Sri T. MARIAPPA.—We will have that suggestion examined.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಿಜವಾದ ಪಾಯಿಂಟಿಗೆ ಉತ್ತರ ಕೊಡುವುದಿಲ್ಲ. ಮೊದಲ ನೆಯ ಇನ್‌ಸ್ಟಾಲ್‌ಮೆಂಟ್ ಕೊಡುವುದಕ್ಕೆ ಅವಕಾಶವಿದೆ. ಆದರೆ ಈ ಹಣ ಖರ್ಚಾಗಿದೆಯೇ, ಕೆಲಸ ನಡೆದಿದೆಯೇ ಎಂದು ನೋಡದೆ ಎರಡನೆಯ ಇನ್‌ಸ್ಟಾಲ್‌ಮೆಂಟ್ ವರ್ಷದ ಕೊನೆಯಲ್ಲಿ ಕೊಡತಕ್ಕ ಒಂದು ಪದ್ಧತಿಯನ್ನು ಹೇಗೆ ತಾವು ಒಪ್ಪಿಕೊಂಡಿರಿ? ಈಗ we will get it examined ಎಂದರೆ ಹೇಗೆ?

ಶ್ರೀ ಟಿ. ಮರಿಯಪ್ಪ.—Emergent cases ನಲ್ಲಿ first instalment ಕೊಟ್ಟಿದೇವೆ. ಒಂದೊಂದು ಸಲ second instalment ಹಣ ಸಹ ಬೇಕಾಗುತ್ತದೆಂದು ಕೇಳಿದಾಗ ಕೊಡ ಬೇಕಾಗುತ್ತದೆ. Local Development works ಬಗ್ಗೆ ವಿವರಗಳು ಬೇಕಾದರೆ ಈ ಸಭೆಗೆ ಒದಗಿಸುತ್ತೇನೆ. We will place all the details after verifying them.

Fertilisers ವಿಷಯ ಮಾತನಾಡಿದ್ದಾರೆ. ಇದರಲ್ಲಿ ಒಂದು ವಿಷಯವನ್ನು ಹೇಳಿದರೆ ಪ್ರಾಯಶಃ ಈ ಸಭೆಯವರು ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ. ಸಾಮಾನ್ಯವಾಗಿ ಸರ್ಕಾರದ ಇಲಾಖೆಯವರು ವ್ಯಾಪಾರ ಮಾಡುವುದಕ್ಕೆ ಬದಲಾಗಿ ಸಹಕಾರ ಇಲಾಖೆ ಮೂಲಕ ಸಪ್ಲೈ ಮಾಡುವುದು ಸಾಧುವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳಲೇ ಬೇಕು. ಈ ಕಾಲದಲ್ಲಿ, ಅದರಲ್ಲಿಯೂ ಸಹಕಾರ ತತ್ವವನ್ನನುಸರಿಸಿ ನಮ್ಮ ಜನ ಜೀವನವನ್ನು ಪುನರ್ನಿರ್ಮಾಣ ಮಾಡ ಬೇಕೆನ್ನುವ ಕಾಲದಲ್ಲಿ ಸಹಕಾರ ತತ್ವವನ್ನು ಒಪ್ಪಿಕೊಳ್ಳುವುದಿಲ್ಲವೆಂದು ತಲೆ ಅಲ್ಲಾಡಿಸಿದರೆ ಏನೂ ಪ್ರಯೋಜನವಿಲ್ಲ.

Sri C. K. RAJAIAH SHETTY.—You were the pioneer of the multi-purpose societies; why did they end in tragedy ?

Sri T. MARIAPPA.—All the societies have been revived and they are functioning very well now.

Sri M. C. NARASIMHAN.—That is not the point. The Committee says that their additional expenditure. Is it not your duty to look into that aspect? Or, you must frankly say you differ from the committee.

Sri T. MARIAPPA.—With reference to this particular item, I entirely differ from the committee. After all, we must all agree that the departmental distribution is not as good as the co-operative institution. It is not the Central Marketing Society that distributes. It goes to the marketing society of the taluk and then to the primary societies. We have got a net work througout the State and therefore, it is better to get this distributed through them. Therefore, we have liberally laid down a procedure.

ಆ ಪ್ರೊಸೀಜರ್‌ನಲ್ಲಿ ಹೇಗೆ ಇರಬೇಕು, ಯಾವಯಾವ ಅಧಿಕಾರಿಗಳಿರಬೇಕು, ಅವರ ಜವಾಬ್ದಾರಿ ಏನು ಎಂದು ತಿಳಿಸಿದ್ದೇವೆ. ಅವರಿಗೆ staff ಕೂಡ lend ಮಾಡಿದ್ದೇವೆ. ಕೋಆಪರೇಟಿವ್ ಸೊಸೈಟಿ ವಿಚಾರದಲ್ಲಿ ಸ್ಟಾಫ್ ಚಾರ್ಜಸ್ ಹತ್ತು ರೂಪಾಯಿವರೆಗೆ ಕೊಟ್ಟಿದ್ದಾರೆ. ಸಾಲದ ವಿಚಾರದಲ್ಲಿ ಪದೇ ಪದೇ ಸೂಕ್ಷ್ಮವಾಗಿ ತಿಳಿಸುತ್ತಾ ಬಂದಿದ್ದೇವೆ. ಆದ್ದರಿಂದ ಅದರ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ. Period of reconstruction and ಪ್ಲಾನ್ ಪೀರಿಯಡ್‌ನಲ್ಲಿ ಡೆಟ್ ಜಾಸ್ತಿಯಾಗುತ್ತದೆ. ಅದನ್ನು ರಿಸ್ಟ್ರಿಕ್ಟ್ ಮಾಡಲು ಆಗುವದಿಲ್ಲ, ಅಸೆಟ್ಸ್ ಜಾಸ್ತಿ ಕ್ರಿಯೇಟ್ ಮಾಡಿ ಅದರಿಂದ ರಿಟರ್ನ್ ದೊರೆಯುವುದು ಈ ಅವಧಿಯಲ್ಲಿ ಸಾಧ್ಯವಿಲ್ಲ. ಸದ್ಯಕ್ಕೆ ಸಿಂಕಿಂಗ್ ಫಂಡ್‌ನಲ್ಲಿ sufficient amount ಇದೆ. ರಾಜ್ಯ ಸರಕಾರ ಪಬ್ಲಿಕ್ ಲೋನ್ ಎತ್ತುವದರಿಂದ ಕೇಂದ್ರ ಸರಕಾರ ಲೋನ್ ಎತ್ತುವದರಿಂದ ಹಣ ದೊರೆಯುತ್ತಿದೆ. ಪ್ರತಿ ವರ್ಷ ಸಿಂಕಿಂಗ್ ಫಂಡಿನಲ್ಲಿ ಸಾಕಷ್ಟು ಹಣ ಇಡಬೇಕೆಂದಿದೆ. Financial position is very sound. All over India, the same uniform procedure is adopted.

ಇನ್ನು ಪ್ಯಾರಾ 61ರಲ್ಲಿ ಹೇಳಿರುವ ವಿಚಾರದಲ್ಲಿ ಸ್ವಲ್ಪ difference of opinion ಇದೆ. Loans are very old ಅವುಗಳನ್ನು replace ಮಾಡಬೇಕಾಗಿತ್ತು ಎಂದು ತಿಳಿಸಿದ್ದಾರೆ. ಅದಕ್ಕೆ ಬಹಳ ಸಂತೋಷ. ಹೊಸಯಂತ್ರ ಬರುವುದು ಯಾರಿಗೆ ಬೇಡ? ಆದರೆ foreign exchange ದೊರೆಯುವುದು ಕಷ್ಟವಾಗಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರೆ ಚೆನ್ನಾಗಿತ್ತು ಇನ್ನೊಂದು ವಿಚಾರದ ಬಗ್ಗೆ ಹೇಳಬೇಕಾಗಿದೆ, ಹೊಸ ಡಿಸೈನರ್ ನೇಮಕ ಬಗ್ಗೆ ಒಂದು ಮಾತು ಹೇಳಿದ್ದಾರೆ. ಅವರು ಮ್ಯಾನುಫಾಕ್ಚರ್ ಮಾಡಿದ ವಸ್ತುಗಳು ಷೋರೂಂನಲ್ಲಿವೆ. ಅಲ್ಲಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಅವರು ತಯಾರಿಸಿದ 50 ಹೊಸ ಡಿಸೈನುಗಳು ಷೋರೂಂನಲ್ಲಿವೆ coloured glass ನಲ್ಲಿ ನೋಡುವುದು ಸರಿಯಲ್ಲ. ಈ ರೀತಿ ಹೇಳಿರುವುದು ತಪ್ಪು. I am really very sorry. I want to know who gave this impression, to the committee. There is a showroom opened here, you can walk into the showroom any evening and find out for yourself.

Sri J. B. MALLARADHYA.—The allegation made is the person appointed has not got the requisite qualfications.

Sri T. Mariappa.—He was in a textile factory for a number of years we had to take his service from another textile factory.

ಸದಸ್ಯರು ಈ ರೀತಿ ಟೀಕೆ ಮಾಡುವುದು ಬೇಕಾಗಿರಲಿಲ್ಲ, ಸರಕಾರದ ಪರವಾಗಿ ಯಾವ controversy raise ಮಾಡುವದಿಲ್ಲ. It should be above controversy. ಇದನ್ನು ಒತ್ತಿ ಹೇಳುತ್ತೇನೆ. ಅವರ ಒಳ್ಳೇ ಸಲಹೆಗಳನ್ನು ಸ್ವೀಕರಿಸೋಣ. ಈ ದೃಷ್ಟಿಯಿಂದ ನಾವು ಪರಿಶೀಲಿಸಬೇಕು. ಸದಸ್ಯರ ಕೆಲವು ಒಳ್ಳೇ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

Mr. Speaker.—The House will now adjourn and meet to-morrow at 9 A.M.

The House adjourned at Fifty Minutes past Six of the Clock, to meet again at Nine of the Clock on Friday, the 24th November 1961.